# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಸೋಮವಾರ, ಜುಲೈ 27, 2020

ಸಂಪುಟ : 47 ಸಂಚಿಕೆ : 78 ದೂರವಾಣಿ : 254736 ವಾಟ್ಸ್ಆ್ಯಪ್ : 91642 99999 ಪುಟ : 4 ರೂ : 3.00 www.janathavani.com Email: janathavani@mac.com


# ಲಾಕ್‌ಗೆ ಸ್ಪಂದನೆ ಜೊತೆ ಉಲ್ಲಂಘನೆ

## ಒಳ ರಸ್ತೆಗಳನ್ನು ಹೊರತುಪಡಿಸಿ, ಬಹುತೇಕ ಮುಖ್ಯ ರಸ್ತೆಗಳು ಸ್ತಬ್ಧ



ಮಳೆ ಬಂದರೇನು? ಲಾಕ್‌ಡೌನ್ ಇದ್ದರೇನು? ಅಗತ್ಯ ವಸ್ತುಗಳ ಸೇವೆಗೆ ಅಡೆ ತಡೆ ಇಲ್ಲ. ದಾವಣಗೆರೆಯ ಅಶೋಕ ರಸ್ತೆಯಲ್ಲಿ ದ್ವಿಚಕ್ರ ಸವಾರನೊಬ್ಬ ಮಳೆಯಲ್ಲಿಯೇ ಸರಿಸಿದ್ದ ಬ್ಯಾರಿಕೇಡ್‌ಗಳ ನಡುವೆ ಬಾಳೆ ಎಲೆ ಕೊಂಡೊಯ್ಯುತ್ತಿರುವುದು.

ದಾವಣಗೆರೆ, ಜು.26- ನಾಲ್ಕನೇ ಭಾನುವಾರದ ಲಾಕ್‌ಡೌನ್ ಗೂ ನಗರದಲ್ಲಿ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಈ ವಾರವೂ ನಗರ ಸ್ತಬ್ಧವಾಗಿತ್ತು.

ಕಳೆದ ಮೂರನೇ ಭಾನುವಾರದ ಲಾಕ್ ಡೌನ್ ನಂತೆಯೇ ಅಗತ್ಯ ವಸ್ತುಗಳನ್ನು ಹೊರತುಪಡಿಸಿ ಬಹುತೇಕ ಅಂಗಡಿ-ಮುಂಗಟ್ಟುಗಳು ಬಂದ್ ಆಗಿದ್ದವು. ಪ್ರಮುಖ ರಸ್ತೆಗಳು ಬಿಕೋ ಎನ್ನುತ್ತಿದ್ದವು. ಬಡಾವಣೆಯ ಒಳರಸ್ತೆಗಳಲ್ಲಿ ಅಗತ್ಯ ವಸ್ತುಗಳ ಅಂಗಡಿ ಮುಂಗಟ್ಟುಗಳನ್ನು ಬಿಟ್ಟರೆ ಬಹುತೇಕ ಮುಖ್ಯರಸ್ತೆಗಳಲ್ಲಿ ವ್ಯಾಪಾರ ವಹಿವಾಟಿಲ್ಲದೆ ಸ್ತಬ್ಧವಾಗಿದ್ದು ಕಂಡುಬಂತು.

ನಿತ್ಯ ಬಳಕೆ ವಸ್ತುಗಳಾದ ತರಕಾರಿ, ಹಾಲು, ಆಸ್ಪತ್ರೆ, ಮೆಡಿಕಲ್ ಅಂಗಡಿಗಳನ್ನು ಹೊರತುಪಡಿಸಿ, ಬಹುತೇಕ ಅಂಗಡಿ ಮುಂಗಟ್ಟುಗಳನ್ನು ಮುಂಜಾನೆಯಿಂದಲೇ ವರ್ತಕರು, ಸಾರ್ವಜನಿಕರು ಸ್ವಯಂ ಪ್ರೇರಣೆಯಿಂದ ಬಂದ್ ಮಾಡಿದ್ದು ಕಂಡುಬಂತು. ದಿನಸಿ, ಹಾಲು, ಮೆಡಿಕಲ್‌ಗಳಲ್ಲಿ ಅಂತರ ಕಾಯ್ದುಕೊಂಡು ಖರೀದಿಯಲ್ಲಿ ತೊಡಗಿದ್ದರು. ಭಾನುವಾರ ಮಾಂಸದೂಟಕ್ಕಾಗಿ ಮುಂಜಾನೆಯಿಂದಲೇ ಕೋಳಿ, ಮಟನ್ ಅಂಗಡಿಗಳ ಮುಂದೆ ಜನರು ಮುಗಿಬಿದ್ದಿದ್ದರು. ಕೆಲ ಪ್ರಮುಖ ದ್ವಿಮುಖ ರಸ್ತೆಗಳನ್ನು ಏಕಮುಖ ಮಾಡಲಾಗಿತ್ತು. ಕೆಲ ರಸ್ತೆಗಳಿಗೆ ಬ್ಯಾರಿಕೇಡ್ ಎಳೆದು ಬಂದ್ ಮಾಡಲಾಗಿತ್ತು.

**ಉಲ್ಲಂಘನೆಗೆ ದಂಡದ ಬಿಸಿ:** ಈ ವಾರವೂ ಸಂಡೇ ಲಾಕ್ ಡೌನ್ ಉಲ್ಲಂಘನೆ ಮಾಡಿ ಅನವಶ್ಯಕವಾಗಿ **(2ನೇ ಪುಟಕ್ಕೆ)**

### ಸಕಾಲಕ್ಕೆ ಸಿಗದ ಚಿಕಿತ್ಸೆ : ಪೌರ ಕಾರ್ಮಿಕ ಸಾವು

ದಾವಣಗೆರೆ, ಜು.26- ಸಕಾಲಕ್ಕೆ ಚಿಕಿತ್ಸೆ ಸಿಗದೇ ನಾನ್ ಕೋವಿಡ್ ರೋಗಿಯೋರ್ವ ಮೃತಪಟ್ಟಿರುವ ಘಟನೆ ನಗರದಲ್ಲಿ ಇಂದು ನಡೆದಿದ್ದು, ಇದು ಎರಡನೇ ಪ್ರಕರಣವಾಗಿದೆ. ನಗರ ಪಾಲಿಕೆಯ ಪೌರ ಕಾರ್ಮಿಕ ಕುಮಾರ್ (35) ಮೃತನು. ಈತ ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದ. ಸಂಬಂಧಿಕರು ಬೆಳಗ್ಗೆಯಿಂದ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗಳಲ್ಲಿ ಬೆಡ್ ಸಿಗದೆ ಅಲೆದಾಡಿದ್ದಾರೆ. ಕೊನೆಗೆ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ನೀಡಲಾಗಿದೆ. ಆದರೆ, ದಾಖಲು ಮಾಡಿದ ಕೆಲವೇ ಕ್ಷಣಗಳಲ್ಲಿ ಮೃತಪಟ್ಟಿದ್ದಾರೆ. ಇದೇ ರೀತಿಯಾಗಿ ಇತ್ತೀಚೆಗೆ ಪೊಲೀಸ್ ಹೆಡ್ ಕಾನ್ ಸ್ಟೇಬಲ್ ಓರ್ವರು ಮೃತಪಟ್ಟಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

### 1.21 ಲಕ್ಷ ರೂ. ದಂಡ ವಸೂಲಿ

ದಾವಣಗೆರೆ, ಜು.26- ಜಿಲ್ಲೆಯಲ್ಲಿ ಮೂರನೇ ಭಾನುವಾರದ ಲಾಕ್ ಡೌನ್ ಗೆ ಹೋಲಿಸಿದರೆ ಈ ವಾರ ನಾಲ್ಕನೇ ಲಾಕ್ ಡೌನ್ ನ ನಿಯಮ ಉಲ್ಲಂಘನೆ ಹಾಗೂ ಹೆಲ್ಮೆಟ್ ಮತ್ತು ಲೈಸೆನ್ಸ್ ಇಲ್ಲದೇ ವಾಹನಗಳು ರಸ್ತೆಗಿಳಿದ ಪ್ರಕರಣಗಳು ಹೆಚ್ಚಾಗಿವೆ.

ಭಾರತೀಯ ಮೋಟಾರು ವಾಹನ (ಐಎಂವಿ) ಕಾಯ್ದೆಯಡಿ ಜಿಲ್ಲಾ ಪೊಲೀಸ್ ದಂಡ ವಿಧಿಸಿ ಬಿಸಿ ಮುಟ್ಟಿಸಿದ್ದಾರೆ. ಅಲ್ಲದೇ ಕೊರೊನಾ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆಯಾಗಿ ಮಾಸ್ಕ್ ಧರಿಸದವರಿಗೂ ದಂಡದ ಬಿಸಿ ತಟ್ಟಿದೆ.

ಈ ಭಾನುವಾರ ಒಟ್ಟು 376 ಮಾಸ್ಕ್ ಧರಿಸದ ಪ್ರಕರಣಗಳನ್ನು ದಾಖಲಿಸಿ 56 ಸಾವಿರ ದಂಡ ವಸೂಲಾಗಿದ್ದು, 287 ಐಎಂವಿ ಪ್ರಕರಣಗಳನ್ನು ದಾಖಲಿಸಿ 1 ಲಕ್ಷದ 21 ಸಾವಿರದ 300 ರೂ. ದಂಡ ವಸೂಲಿ ಮಾಡಲಾಗಿದೆ. ಕಳೆದ ಮೂರನೇ ಭಾನುವಾರದ ಲಾಕ್ ಡೌನ್ ವೇಳೆ ಒಟ್ಟು 182 ಮಾಸ್ಕ್ ಧರಿಸದ ಪ್ರಕರಣಗಳನ್ನು ದಾಖಲಿಸಿ 33 ಸಾವಿರ ದಂಡ ವಸೂಲಾಗಿತ್ತು. 112 ಐಎಂವಿ ಪ್ರಕರಣಗಳನ್ನು ದಾಖಲಿಸಿ 48,500 ದಂಡ ವಸೂಲಿ ಮಾಡಲಾಗಿತ್ತು.

ನಗರ ಪ್ರದೇಶದಲ್ಲಿ ಒಟ್ಟು 185 ಮಾಸ್ಕ್ ಧರಿಸದ ಪ್ರಕರಣಗಳನ್ನು ದಾಖಲಿಸಿ 37 ಸಾವಿರ ದಂಡ ವಸೂಲಾಗಿದ್ದು, 153 ಐಎಂವಿ ಪ್ರಕರಣಗಳನ್ನು ದಾಖಲಿಸಿ 56 ಸಾವಿರದ 200 ದಂಡ **(2ನೇ ಪುಟಕ್ಕೆ)**

### ಮೃತ ಸಂಬಂಧಿಯ ಕಾಲಿಗೆ ಬೀಳಲು ಮುಂದಾದ ಜಿಲ್ಲಾಧಿಕಾರಿ

**ಮೃತ ಪೌರ ಕಾರ್ಮಿಕ ಕುಮಾರ್ ಅವರ ಮಾವ ಉಚ್ಚೆಂಗೆಪ್ಪ ಬೆಡ್ ಗಾಗಿ ಪರದಾಡಿದ ಪರಿಸ್ಥಿತಿ ಬಗ್ಗೆ ವಿವರಿಸಿ ಚಿಕಿತ್ಸೆ ನೀಡುವಂತೆ ಜಿಲ್ಲಾಧಿಕಾರಿಗಳ ಕಾಲಿಗೆ ಬೀಳಲು ಮುಂದಾದರು. ಆಗ ಆ ವ್ಯಕ್ತಿಯನ್ನು ತಡೆದು ಸ್ವತಃ ಜಿಲ್ಲಾಧಿಕಾರಿಗಳೂ ಸಹ ಆ ವ್ಯಕ್ತಿಯ ಕಾಲಿಗೆ ಬೀಳಲು ಮುಂದಾದರಲ್ಲದೇ, ನಾವು ಇದ್ದೇವೆ ಚಿಕಿತ್ಸೆ ಕೊಡಿಸುವ ಜವಾಬ್ದಾರಿ ನಮ್ಮದು ಎಂದು ಸಮಾಧಾನಪಡಿಸಿದರು. ನಗರ ಪಾಲಿಕೆ** **(2ನೇ ಪುಟಕ್ಕೆ)**

### ಜಿಲ್ಲಾಸ್ಪತ್ರೆಗೆ ಡಿಸಿ ದಿಢೀರ್ ಭೇಟಿ: ಪರಿಶೀಲನೆ

**ನಾನ್ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ಸಿಗದ ಆರೋಪ ಹಿನ್ನೆಲೆ ವೈದ್ಯಕೀಯ ಸಿಬ್ಬಂದಿಗಳಿಗೆ ಶಿಸ್ತು ಕ್ರಮದ ಎಚ್ಚರಿಕೆ**

ದಾವಣಗೆರೆ, ಜು.26- ನಗರದಲ್ಲಿ ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ನಾನ್ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ದೊರಕುತ್ತಿಲ್ಲ ಎಂಬ ಆರೋಪಗಳು ಕೇಳಿ ಬಂದಿವೆ.

ಜಿಲ್ಲಾಸ್ಪತ್ರೆಯಲ್ಲೂ ಕೂಡ ಚಿಕಿತ್ಸೆ ಸಿಗದೇ ನಾನ್ ಕೋವಿಡ್ ರೋಗಿಗಳು ಪರದಾಟ ನಡೆಸಿದ್ದು, ಜಿಲ್ಲಾಸ್ಪತ್ರೆಯ ಮುಂಭಾಗ ದಿಕ್ಕು ತೋಚದೆ ರೋಗಿಗಳು ವ್ಹೀಲ್ ಚೇರ್, ಸ್ಟ್ರೆಚ್ಚರ್ ನಲ್ಲಿ ತೊಂದರೆ ಅನುಭವಿಸಿದ್ದಾರೆನ್ನಲಾಗಿದೆ.

ಕೋವಿಡ್ ಆಸ್ಪತ್ರೆಯಾಗಿ ಜಿಲ್ಲಾಸ್ಪತ್ರೆಯನ್ನು ಮಾಡಲಾಗಿದ್ದು, ಇಲ್ಲಿಗೆ ಬಂದರೆ ಖಾಸಗಿ ಆಸ್ಪತ್ರೆಗೆ ರೆಪರ್ ಮಾಡಿ ಕಳಿಸಲಾಗುತ್ತೆ. ಆದರೆ ಖಾಸಗಿಯಲ್ಲಿ ಮಾತ್ರ ಬೆಡ್ ಇಲ್ಲ ಎನ್ನುವ ಉತ್ತರ ಕೇಳಿ ಬಂದಿದೆ ಎಂದು ಹೇಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಜಿಲ್ಲಾಸ್ಪತ್ರೆಗೆ ಇಂದು ದಿಢೀರ್ ಭೇಟಿ ನೀಡಿ **(2ನೇ ಪುಟಕ್ಕೆ)**



# 24 ಗಂಟೆಗಳಲ್ಲಿ 36 ಸಹಸ್ರ ಚೇತರಿಕೆ

ನವದೆಹಲಿ, ಜು. 26 – ದೇಶದಲ್ಲಿ ಇದೇ ಮೊದಲ ಬಾರಿಗೆ 24 ಗಂಟೆಗಳಲ್ಲೇ 36,145 ಕೊರೊನಾ ಸೋಂಕಿತರು ಚೇತರಿಸಿಕೊಂಡಿದ್ದಾರೆ. ಇದರಿಂದಾಗಿ ದೇಶದಲ್ಲಿ ಕೊರೊನಾ ಸೋಂಕಿತರ ಪ್ರಮಾಣ ಶೇ.63.92ಕ್ಕೆ ತಲುಪಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಇದೇ ವೇಳೆ ಕೊರೊನಾದಿಂದ ಸಂಭವಿಸುವ ಸಾವುಗಳ ಪ್ರಮಾಣವೂ ಶೇ.2.31ಕ್ಕೆ ಇಳಿಕೆಯಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಇದುವರೆಗೂ ದೇಶದಲ್ಲಿ ಒಟ್ಟಾರೆ 8,85,576 ಜನರು ಕೊರೊನಾದಿಂದ ಚೇತರಿಸಿಕೊಂಡಿದ್ದಾರೆ. ದೇಶದಲ್ಲಿ ಒಟ್ಟು ಸೋಂಕಿತರ ಸಂಖ್ಯೆ 13,85,522 ಆಗಿದೆ. ಕೊರೊನಾ ಸೋಂಕಿತರು ಹಾಗೂ ಚೇತರಿಸಿಕೊಂಡವರ ನಡುವಿನ ವ್ಯತ್ಯಾಸ ಈಗ 4,17,694 ಆಗಿದೆ. ಸಕ್ರಿಯ ಸೋಂಕಿತರಿಗಿಂತ 1.89 ಪಟ್ಟು ಜನರು ಕೊರೊನಾದಿಂದ ಚೇತರಿಸಿಕೊಂಡಿದ್ದಾರೆ.

ಅಲ್ಲದೇ ಒಂದೇ ದಿನದಂದು ದಾಖಲೆಯ 4.40 ಲಕ್ಷಕ್ಕೂ ಹೆಚ್ಚು ಕೊರೊನಾ ಟೆಸ್ಟ್‌ಗಳನ್ನು ನಡೆಸಲಾಗಿದೆ. ದೇಶದಲ್ಲಿ ಇದುವರೆಗೂ ನಡೆಸಲಾಗಿರುವ ಪರೀಕ್ಷೆಗಳ ಸಂಖ್ಯೆ 16 ದಶಲಕ್ಷ ದಾಟಿದೆ.

ಕಳೆದ 24 ಗಂಟೆಗಳಲ್ಲಿ 4,42,263 ಪರೀಕ್ಷೆಗಳನ್ನು ನಡೆಸಲಾಗಿದೆ. ಇದರಿಂದಾಗಿ ಪ್ರತಿ **(4ನೇ ಪುಟಕ್ಕೆ)**

### ಕೊರೊನಾ ಔಷಧಿ ರೂಪಿಸುವಲ್ಲಿ ಮಹತ್ವದ ಹೆಜ್ಜೆ

**ಸೋಂಕಿಗೆ ಕಾರಣವಾಗುವ ಅಂಶ ಪತ್ತೆ ಮಾಡಿದ ವಿಜ್ಞಾನಿಗಳು**

ಹೌಸ್ಟನ್, ಜು. 26 – ಕೊರೊನಾ ವೈರಸ್ ಮನುಷ್ಯನ ದೇಹದ ಭಾಗ ಎಂಬಂತೆ ಬಿಂಬಿಸುವ ವಂಶವಾಹಿ ತಂತುವನ್ನು ಭಾರತೀಯ ಮೂಲದ ವಿಜ್ಞಾನಿ ಒಳಗೊಂಡ ತಂಡವೊಂದು ಪತ್ತೆ ಮಾಡಿದೆ. ಇದು ಕೊರೊನಾ ವಿರುದ್ಧದ ಪರಿಣಾಮಕಾರಿ ಔಷಧಿ ಕಂಡು ಹಿಡಿಯಲು ನೆರವಾಗಲಿದೆ.

ಈ ಅಧ್ಯಯನವನ್ನು ನಿಯತಕಾಲಿಕವಾದ ನೇಚರ್ ಕಮ್ಯುನಿಕೇಷನ್ಸ್‌ನಲ್ಲಿ ಪ್ರಕಟಿಸಲಾಗಿದೆ. ಇದರ ಪ್ರಕಾರ ಎನ್‌ಎಸ್‌ಪಿ10 ಕಣವು ವೈರಸ್‌ನಲ್ಲಿರುವ ಎಂ.ಆರ್.ಎನ್.ಎ. ಅನ್ನು ಮನುಷ್ಯರ ರಕ್ತ ಕಣಗಳಲ್ಲಿರುವ ಎಂಆರ್‌ಎನ್‌ಎ ರೀತಿ ಬಿಂಬಿಸುತ್ತದೆ.

ಅಮೆರಿಕದ ಸ್ಯಾನ್ ಅಂಟೋನಿಯೋದಲ್ಲಿರುವ ಟೆಕ್ಸಾಸ್ ಆರೋಗ್ಯ ವಿಜ್ಞಾನ ಕೇಂದ್ರ ವಿಶ್ವ ವಿದ್ಯಾನಿಲಯದ ಸಂಶೋಧಕರು **(2ನೇ ಪುಟಕ್ಕೆ)**

# ಜಿಲ್ಲೆಯಲ್ಲಿ 3 ಸಾವು, 86 ಪಾಸಿಟಿವ್

## 57 ಜನರು ಗುಣಮುಖ, ಸಕ್ರಿಯ ಸೋಂಕಿತರ ಸಂಖ್ಯೆ 520

ದಾವಣಗೆರೆ, ಜು. 26 - ಜಿಲ್ಲೆಯಲ್ಲಿ ಭಾನುವಾರದಂದು 89 ಕೊರೊನಾ ಪ್ರಕರಣಗಳು ವರದಿಯಾಗಿದ್ದು, ಮೂವರು ಸಾವನ್ನಪ್ಪಿದ್ದಾರೆ. ಇದೇ ದಿನದಂದು 57 ಜನರು ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ಜಿಲ್ಲೆಯಲ್ಲಿ ಸಕ್ರಿಯ ಕೊರೊನಾ ಸೋಂಕಿತರ ಸಂಖ್ಯೆ 520ಕ್ಕೆ ತಲುಪಿದೆ.

ಇದುವರೆಗೆ ಜಿಲ್ಲೆಯಲ್ಲಿ 1,423 ಸೋಂಕು ಪ್ರಕರಣಗಳು ಕಾಣಿಸಿಕೊಂಡಿವೆ. ಇವರಲ್ಲಿ 867 ಜನರು ಇದುವರೆಗೂ ಗುಣಮುಖರಾಗಿದ್ದಾರೆ. ಜಿಲ್ಲೆಯಲ್ಲಿ ಕೊರೊನಾದಿಂದ ಒಟ್ಟು 36 ಸಾವುಗಳು ಸಂಭವಿಸಿವೆ.

ದಾವಣಗೆರೆ ತಾಲ್ಲೂಕಿನಲ್ಲಿ 54 ಸೋಂಕುಗಳು ಕಾಣಿಸಿಕೊಂಡಿವೆ. ಹರಿಹರದಲ್ಲಿ 5, ಜಗಳೂರಿನಲ್ಲಿ 15, ಚನ್ನಗಿರಿಯಲ್ಲಿ 10, ಹೊನ್ನಾಳಿಯಲ್ಲಿ 4 ಹಾಗೂ ಅನ್ಯ ಜಿಲ್ಲೆಯ ಒಂದು ಪ್ರಕರಣ ಕಾಣಿಸಿಕೊಂಡಿದೆ. ಬಿಡುಗಡೆಯಾದವರಲ್ಲಿ ದಾವಣಗೆರೆ ತಾಲ್ಲೂಕಿನ 31, ಹರಿಹರದ 12, ಜಗಳೂರಿನ ಆರು, ಚನ್ನಗಿರಿಯ ಐದು, ಹೊನ್ನಾಳಿಯ ಒಂದು ಹಾಗೂ ಇತರೆ ಜಿಲ್ಲೆಗಳ ಎರಡು ಪ್ರಕರಣಗಳು ಸೇರಿವೆ.

ದಾವಣಗೆರೆಯ ಆಜಾದ್ ನಗರದ 21 ವರ್ಷದ ವ್ಯಕ್ತಿ ಕೊರೊನಾ ಸೋಂಕಿನಿಂದ ಸಾವನ್ನಪ್ಪಿದ್ದಾರೆ. ಇವರು ಸಕ್ಕರೆ ಕಾಯಿಲೆಯ ಸಮಸ್ಯೆಯಿಂದಲೂ ಬಳಲುತ್ತಿದ್ದರು. ನರಸರಾಜ ಪೇಟೆಯ 64 ವರ್ಷದ ಪುರುಷ ಸೋಂಕಿನಿಂದ ಸಾವನ್ನಪ್ಪಿದ್ದಾರೆ. ಇವರು ಸಕ್ಕರೆ ಕಾಯಿಲೆ, ರಕ್ತದೊತ್ತಡ ಹಾಗೂ ಹೃದಯ ರೋಗದಿಂದ ಬಳಲುತ್ತಿದ್ದರು. ಹರಿಹರ ತಾಲ್ಲೂಕು ಮಲೇಬೆನ್ನೂರಿನ 65 ವರ್ಷದ ಮಹಿಳೆ ಮೃತಪಟ್ಟಿದ್ದು, ಇವರೂ ಸಕ್ಕರೆ ಕಾಯಿಲೆ ಸಮಸ್ಯೆ ಹೊಂದಿದ್ದರು.

ದಾವಣಗೆರೆ ನಗರದ ಎಂ.ಸಿ.ಸಿ. ಬಿ ಬ್ಲಾಕ್‌ನ 72ರ ವೃದ್ಧ, ಚೌಕಿಪೇಟೆಯ 27 ಹಾಗೂ 54ರ ಮಹಿಳೆಯರು, ಅಶೋಕ ನಗರದ 27ರ ಮಹಿಳೆ, ಆಜಾದ್ ನಗರದ 30ರ ಪುರುಷ ಹಾಗೂ 22ರ ಮಹಿಳೆ, ರೈತರ ಬೀದಿಯ 48ರ ಮಹಿಳೆ, ಕೆ.ಬಿ. ಬಡಾವಣೆಯ 54ರ ಪುರುಷ, ಭಗತ್ ಸಿಂಗ್ ನಗರದ 47ರ ಮಹಿಳೆ, ವಸಂತ ರಸ್ತೆಯ 65ರ ಪುರುಷ, ಮಲ್ಲಿಕಾರ್ಜುನ್ ಚೌಲ್ಟ್ರಿ ಹಿಂದಿನ 18ರ ಯುವತಿಗೆ ಸೋಂಕು ಬಂದಿದೆ.

ಬಸವರಾಜ ಪೇಟೆಯ 31ರ ಮಹಿಳೆ, ಜಾಲಿನಗರ 34ರ ಮಹಿಳೆ ಹಾಗೂ 46ರ ಪುರುಷ, 75 ಹಾಗೂ 85ರ ವೃದ್ಧರು, ಎನ್.ಆರ್. ಪೇಟೆಯ **(2ನೇ ಪುಟಕ್ಕೆ)**

### ಅರಣ್ಯ ಸಚಿವ ಆನಂದ್ ಸಿಂಗ್‌ಗೆ ಕೊರೊನಾ



**ಬಳ್ಳಾರಿ, ಜು. 26 - ಅರಣ್ಯ ಸಚಿವ ಆನಂದ್ ಸಿಂಗ್ ಅವರಿಗೆ ಕೊರೊನಾ ಸೋಂಕು ಬಂದಿರುವು ದಾಗಿ ಅವರ ನಿಕಟವರ್ತಿ ಮೂಲಗಳು ತಿಳಿಸಿವೆ. ಶುಕ್ರವಾರ ದಂದು ಸಿಂಗ್ ಕೊರೊನಾ ಟೆಸ್ಟ್‌ಗೆ ಒಳಗಾಗಿದ್ದರು. ಶನಿವಾರ ರಾತ್ರಿ ಫಲಿತಾಂಶ ಬಂದಿದೆ. ಆದರೆ, ಅವರಲ್ಲಿ ಸೋಂಕಿನ ಯಾವುದೇ ಲಕ್ಷಣಗಳು ಕಂಡು ಬಂದಿಲ್ಲ ಎಂದು ನಿಕಟವರ್ತಿಗಳು ತಿಳಿಸಿದ್ದಾರೆ. ಕೆಲ ದಿನಗಳ ಹಿಂದೆ ಸಚಿವರ ವಾಹನ ಚಾಲಕ ನಲ್ಲಿ ಸೋಂಕು ಕಂಡು ಬಂದಿತ್ತು. ಇದಕ್ಕೂ ಮುಂಚೆ ಪ್ರವಾಸೋದ್ಯಮ ಸಚಿವ ಸಿ.ಟಿ. ರವಿ ಅವರಲ್ಲೂ ಸೋಂಕು ಪತ್ತೆಯಾಗಿತ್ತು.**

### ಕೊರೊನಾ ಸೋಂಕಿತರ ಸಂಖ್ಯೆ 13.85 ಲಕ್ಷಕ್ಕೆ

ನವದೆಹಲಿ,ಜು. 26 – ದೇಶದಲ್ಲಿ ಒಂದೇ ದಿನದಲ್ಲಿ 48,661 ಸೋಂಕಿತರು ಕಂಡು ಬಂದಿದ್ದು, ದೇಶದ ಒಟ್ಟು ಸೋಂಕಿತರ ಸಂಖ್ಯೆ 13.85 ಲಕ್ಷಕ್ಕೆ ತಲುಪಿದೆ. ಇದುವರೆಗೂ 8.85 ಲಕ್ಷ ಜನರು ಚೇತರಿಸಿ ಕೊಂಡಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.


ದೇಶದಲ್ಲಿ ಕೊರೊನಾ ಕಾರಣದಿಂದ ಇದುವರೆಗೂ 32, 063 ಜನರು ಸಾವನ್ನಪ್ಪಿ ದ್ದಾರೆ.

ದೇಶದಲ್ಲಿ ಈಗ 4.67 ಲಕ್ಷ ಸಕ್ರಿಯ ಸೋಂಕು ಪ್ರಕರಣಗಳಿವೆ.

**ಭದ್ರಾ ಜಲಾಶಯ**

**ಇಂದಿನ ಮಟ್ಟ : 154 ಅಡಿ**
**ಒಳ ಹರಿವು : 1949 ಕ್ಯೂಸೆಕ್ಸ್**
**ಹೊರ ಹರಿವು : 1949 ಕ್ಯೂಸೆಕ್ಸ್**
**ಹಿಂದಿನ ವರ್ಷದ್ದು : 140.1 ಅಡಿ**

### ಸೋಂಕಿತರ ಒಂಟಿತನದ ಬಗ್ಗೆ ಗಮನ ಸೆಳೆದ ಅಮಿತಾಬ್



ಮುಂಬೈ, ಜು. 26 – ಕೊರೊನಾ ಸೋಂಕಿಗೆ ಸಿಲುಕಿ ಚಿಕಿತ್ಸೆ ಪಡೆಯುತ್ತಿರುವ ಬಾಲಿವುಡ್ ತಾರೆ ಅಮಿತಾಬ್ ಬಚ್ಚನ್, ಪ್ರತ್ಯೇಕ ವಾರ್ಡುಗಳಲ್ಲಿರುವ ಸೋಂಕಿತರು ಎದುರಿಸುವ ಮಾನಸಿಕ ಆರೋಗ್ಯ ಸಮಸ್ಯೆಗಳ ಬಗ್ಗೆ ಗಮನ ಸೆಳೆದಿದ್ದಾರೆ.

77 ವರ್ಷದ ಅಮಿತಾಬ್, ಅವರ ಪುತ್ರ ಅಭಿಷೇಕ್ ಬಚ್ಚನ್ ಅವರನ್ನು ಜುಲೈ 11ರಿಂದ ಇಲ್ಲಿನ ನಾನಾವತಿ ಆಸ್ಪತ್ರೆಯ ಪ್ರತ್ಯೇಕ ವಾರ್ಡ್‌ಗಳಲ್ಲಿ ಇರಿಸಲಾಗಿದೆ.

ಶನಿವಾರ ಬ್ಲಾಗ್‌ನಲ್ಲಿ ತಮ್ಮ ಅನುಭವ ಬರೆದಿರುವ ಅಮಿತಾಬ್, ರೋಗಿಗಳನ್ನು ಮಾನವ ಸಂಪರ್ಕದಿಂದ ದೂರ ಇಡುವುದರಿಂದ ಮಾನಸಿಕ **(2ನೇ ಪುಟಕ್ಕೆ)**

### ಆ.5ರ ರಾಮ ಮಂದಿರ ಶಿಲಾನ್ಯಾಸ ಕಾರ್ಯಕ್ರಮ ದೂರದರ್ಶನದಲ್ಲಿ ಪ್ರಸಾರ



ನವದೆಹಲಿ, ಜು. 26 – ಬರುವ ಆಗಸ್ಟ್ 5ರಂದು ನಡೆಯಲಿರುವ ಅಯೋಧ್ಯೆ ರಾಮ ಮಂದಿರದ ಶಿಲಾನ್ಯಾಸ ಕಾರ್ಯಕ್ರಮವನ್ನು ದೂರದರ್ಶನದಲ್ಲಿ ನೇರ ಪ್ರಸಾರ ಮಾಡಲಾಗುವುದು ಎಂದು ದೇವಾಲಯದ ಟ್ರಸ್ಟಿಗಳು ತಿಳಿಸಿದ್ದಾರೆ.

ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದಾರೆ. ದೇವಾಲಯ ನಿರ್ಮಾಣದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಬಿಜೆಪಿ ಹಿರಿಯ ನಾಯಕರಾದ ಎಲ್.ಕೆ. ಅದ್ವಾನಿ, ಮುರುಳಿ ಮನೋಹರ ಜೋಷಿ **(4ನೇ ಪುಟಕ್ಕೆ)**

### ಮಾಸ್ಕ್ ಬೇಡ ಎನ್ನುವವರು ವೈದ್ಯರ ಬಗ್ಗೆ ಯೋಚಿಸಿ : ಪ್ರಧಾನಿ

ನವದೆಹಲಿ, ಜು. 26 – ಕೊರೊನಾ ವಿರುದ್ಧ ಜನರು ಎಚ್ಚರವಾಗಿರಬೇಕು ಹಾಗೂ ಯುದ್ಧದ ರೀತಿಯಲ್ಲಿ ಸನ್ನದ್ಧವಾಗಿರಬೇಕು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

67ನೇ ಮಾಸಿಕ ರೇಡಿಯೋ ಕಾರ್ಯಕ್ರಮವಾದ ಮನ್ ಕಿ ಬಾತ್‌ನಲ್ಲಿ ದೇಶವನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ಕೊರೊನಾ ಸೋಂಕಿನಿಂದ ಆಗುತ್ತಿರುವ ಸಾವಿನ ಪ್ರಮಾಣ ಇಳಿಕೆಯಾಗುತ್ತಿದೆ ಹಾಗೂ ಚೇತರಿಕೆಯ ಪ್ರಮಾಣ ಹೆಚ್ಚಾಗುತ್ತಿದೆ. ಆದರೂ, ಈ ಸೋಂಕು ಮಾರಣಾಂತಿಕವಾಗಿದೆ ಎಂದು ತಿಳಿಸಿದ್ದಾರೆ.



ನಾವು ಲಕ್ಷಾಂತರ ಜನರ ಜೀವಗಳನ್ನು ಉಳಿಸಲು ಸಾಧ್ಯವಾಗಿದೆ. ಆದರೂ, ಕೊರೊನಾ ಅಪಾಯ ಇನ್ನೂ ಅಂತ್ಯವಾಗಿಲ್ಲ. ಇದು ಹಲವಾರು ಪ್ರದೇಶಗಳಲ್ಲಿ ವೇಗವಾಗಿ ಹರಡುತ್ತಿದ್ದು, ಎಚ್ಚರವಾಗಿರಬೇಕಿದೆ ಎಂದವರು ತಿಳಿಸಿದ್ದಾರೆ.

ಜನರು ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವುದು ಹಾಗೂ ಆಗಾಗ ಕೈ ತೊಳೆದುಕೊಳ್ಳುವುದನ್ನು ಮುಂದುವರೆಸಬೇಕು. ಎಲ್ಲೆಂದರಲ್ಲಿ ಉಗಿಯಬಾರದು ಹಾಗೂ ಸ್ವಚ್ಛತೆಯನ್ನು ಕಾಪಾಡಬೇಕು. ಇವು ಕೊರೊನಾ ರೋಗದ ವಿರುದ್ಧದ ಅಸ್ತ್ರಗಳು ಎಂದವರು ತಿಳಿಸಿದ್ದಾರೆ.

ಮಾಸ್ಕ್ ಕಿರಿಕಿರಿ ತರುತ್ತದೆ ಎಂದು ಕೆಲವರು ದೂರಿದ್ದಾರೆ. ಬೇರೆಯವರ ಜೊತೆ ಮಾತನಾಡುವಾಗ ಅವುಗಳನ್ನು ತೆರೆಯುತ್ತಾರೆ. ಅಂತಹ ಭಾವನೆ ಇರುವವರು ಒಂದು ಕ್ಷಣ ವೈದ್ಯರು, ನರ್ಸ್‌ಗಳು ಹಾಗೂ ಕೊರೊನಾ ವಾರಿಯರ್‌ಗಳ ಬಗ್ಗೆ ಯೋಚಿಸಬೇಕು ಎಂದು ಮೋದಿ ಹೇಳಿದ್ದಾರೆ. ಇವರು **(2ನೇ ಪುಟಕ್ಕೆ)**


### ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥
ದಾವಣಗೆರೆ ತಾ॥, ಜಿ॥
ಹಳೇಬಿಸಲೇರಿ ಗ್ರಾಮದ ವಾಸಿ
**ಕೆಂಡಪ್ಪ ಶ್ರೀ ಪರಮೇಶ್ವರಪ್ಪ ಮತ್ತು ಸಹೋದರರು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 19-07-2020ನೇ ಭಾನುವಾರ ಬೆಳಿಗ್ಗೆ 11-15ಕ್ಕೆ ನನ್ನ ಚಿಕ್ಕಪ್ಪನವರ ಮಗನಾದ (ದಿ॥ ಕೆಂಡಪ್ಪ ಮತ್ತು ದಿ॥ ಮಹದೇವಮ್ಮನವರ ಮಗ)
**ಶ್ರೀ ಬಿ. ಕೆ. ವೀರಭದ್ರಪ್ಪ,** ಗ್ರಾಮ ಪಂಚಾಯಿತಿ ಮಾಜಿ ಸದಸ್ಯರು
ಇವರು ಕೈಲಾಸವಾಸಿಯಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **'ಕೈಲಾಸ ಶಿವಗಣಾರಾಧನೆ'**ಯನ್ನು ದಿನಾಂಕ 27-07-2020ನೇ ಸೋಮವಾರ ಬೆಳಿಗ್ಗೆ 10-30 ಕ್ಕೆ **ಹಳೇಬಿಸಲೇರಿ ಗ್ರಾಮದ ಶ್ರೀಮತಿ ಗೌರಮ್ಮ ಕುಂದೂರು ವೀರಭದ್ರಪ್ಪ ಸಮುದಾಯ ಭವನದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು,**
ಕೆಂಡಪ್ಪ ಶ್ರೀಮತಿ ಶಾಂತಮ್ಮ ಮತ್ತು ಮಕ್ಕಳು ಹಾಗೂ ಕೆಂಡಪ್ಪ ವಂಶಸ್ಥರು
ಶ್ರೀಮತಿ ಗಾಯತ್ರ, ಶ್ರೀ ಕೆ.ವಿ. ರೇವಣಸಿದ್ದಪ್ಪ ಮತ್ತು ಮಕ್ಕಳು
ಶ್ರೀಮತಿ ಮಮತ, ಶ್ರೀ ಕೆ.ವಿ. ಸುರೇಶ್ ಮತ್ತು ಮಕ್ಕಳು
ಶ್ರೀಮತಿ ಮಂಜಮ್ಮ, ದಿ॥ ಬಿ.ಜಿ. ನಿಂಗರಾಜ ಮತ್ತು ಮಕ್ಕಳು
ಶ್ರೀಮತಿ ಜ್ಯೋತಿ, ಶ್ರೀ ಎನ್.ಬಿ. ರೇವಣಸಿದ್ದಪ್ಪ ಮತ್ತು ಮಕ್ಕಳು
ಬಿಂದಪ್ಪ ಮಲ್ಲಿಕಾರ್ಜುನಪ್ಪ ಮತ್ತು ಸಹೋದರರು ಹಾಗೂ ಮಕ್ಕಳು
ಶ್ರೀಮತಿ ಲಲಿತಮ್ಮ, ಶ್ರೀ ಬಿಂದಪ್ಪ ಗುರುಶಾಂತಪ್ಪ ಮತ್ತು ಮಕ್ಕಳು, ಶಾಮನೂರು
ಶ್ರೀಮತಿ ದ್ರಾಕ್ಷಾಯಣಮ್ಮ, ಶ್ರೀ ಸಣ್ಣನಿಂಗಪ್ಪರ ಪರಮೇಶ್ವರಪ್ಪ ಮತ್ತು ಮಕ್ಕಳು, ಕುಂದೂರು.
ಶ್ರೀಮತಿ ಸಾಕಮ್ಮ, ಶ್ರೀ ಎನ್.ಬಿ. ಕಲ್ಲಪ್ಪ ಮತ್ತು ಮಕ್ಕಳು, ನಾಗನೂರು
ಶ್ರೀಮತಿ ಗೌರಮ್ಮ, ದಿ॥ ಬಸಪ್ಪ ಮತ್ತು ಸಹೋದರರು, ನಾಗನೂರು
ಕೆಂಡಪ್ಪ ವಂಶಸ್ಥರು, ಬಿಂದಪ್ಪ ವಂಶಸ್ಥರು, ಹಳೇಬಿಸಲೇರಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.
**ಮೊ. : 98445-11344, 99003-60926**

**Complex ಮಾರಾಟಕ್ಕೆ**
**ಕಮರ್ಷಿಯಲ್ ಸೈಟು, ಮಳಿಗೆ**
BIET ಕಾಲೇಜ್ ರೋಡ್, ಶಾಮನೂರು ರೋಡ್ ಮಾಲ್ ಹತ್ತಿರ, ಹದಡಿ ರಸ್ತೆ, ನಿಜಲಿಂಗಪ್ಪ ಲೇಔಟ್, Dental College ಎದುರು ಭಾಗದಲ್ಲಿ, P.B. ರೋಡ್, GMIT ಯಿಂದ ಬಸ್‌ಸ್ಟ್ಯಾಂಡ್ ಮಧ್ಯೆ. (20x50, 60x50, 40x70, 40x60, 18x20, 22x60, 100x200, 83x250)
**ಬೂಸ್ನೂರ್ ಕಿರಣ್ (ಏಜೆಂಟ್)**
**98440-63409, 97315-63409**

**ಸೈಟುಗಳು ಮಾರಾಟಕ್ಕಿವೆ**
ವಾಜಪೇಯಿ ಲೇ ಔಟ್‌ನಲ್ಲಿ, ಶಿವಪಾರ್ವತಿ ಲೇ ಔಟ್‌ನಲ್ಲಿ, 30x52 East 40 ಅಡಿ ರೋಡಿಗಿದೆ. 30x30 North West Corner, 30x40, 30x40 West ಅಕ್ಕ ಪಕ್ಕ
**ಐನಳ್ಳಿ ಚನ್ನಬಸಪ್ಪ, ಏಜೆಂಟ್**
**99166 12110, 93410 14130**

**ಎಸ್.ಎಸ್.ಎಸ್. (SSS) ಎಂಟರ್ ಪ್ರೈಸಸ್ ರವರಿಂದ**
ಶ್ರಾವಣದ ಪ್ರಯುಕ್ತ ರಿಯಾಯಿತಿಯಲ್ಲಿ ಸೈಟುಗಳು ಲಭ್ಯ ಕೆ.ಹೆಚ್.ಬಿ. ಎದುರು, ಜೆನಿಸಿಸ್ ಪಕ್ಕ, ನ್ಯಾಷನಲ್ ಹೈವೇಯಲ್ಲಿರುವ ಸಿಟಿಗೆ ಹತ್ತಿರವಿರುವ ಎಂ.ಬಿ ಸಿಟಿಯಲ್ಲಿ ಈ ಹಿಂದೆ ಮಾರಾಟ ಮಾಡಿದ್ದ ರೂ. 1200/- ರಿಂದ 1250/-ಗಳ ಬದಲಿಗೆ ಕೇವಲ ರೂ.999/-ಗಳಲ್ಲಿ ಫೈನಲ್ ಅಪ್ರೂವಲ್ ನೋಂದಾವಣೆಗೆ ಸಿದ್ದವಿರುವ ಹಾಗೂ ಬ್ಯಾಂಕ್ ಸಾಲ ದೊರೆಯುವ ಸೈಟುಗಳು ದೊರೆಯುತ್ತವೆ. ಸಂಪರ್ಕಿಸಿ :
**ಪಠಾಣ್ : 81399-88555, 81973-00410**

**ಮನೆಯಲ್ಲಿದ್ದುಕೊಂಡೇ ಮಾಸ್ಕ್ ಹೊಲಿದುಕೊಡಲು ಅನುಭವಿ ಟೈಲರ್ಸ್ ಬೇಕಾಗಿದ್ದಾರೆ.**
**ಮೊ.93530-55008**

**ಮನೆ ಬಾಡಿಗೆ/ಲೀಜ್‌ಗೆ**
ಭಗೀರಥ ಸರ್ಕಲ್ ಹತ್ತಿರ 10×30 ವಿಸ್ತೀರ್ಣದ ಚಿಕ್ಕ ಮನೆಗಳು ಬಾಡಿಗೆಗೆ/ಲೀಜ್‌ಗೆ ದೊರೆಯುತ್ತವೆ.
ಸಂಪರ್ಕಿಸಿ
**ಮೊ. 94484 39639**

**ಮನೆ ಬಾಡಿಗೆಗೆ ಇದೆ**
ಜಿಲ್ಲಾ ಪಂಚಾಯತ್ ಎದುರುಗಡೆ, ಸರ್ಕ್ಯೂಟ್ ಹೌಸ್ ಪಕ್ಕದ , ಎಸ್.ಎ ರವೀಂದ್ರನಾಥ್ ಬಡಾವಣೆಯಲ್ಲಿ, ಗ್ರೌಂಡ್ ಫ್ಲೋರ್ ಹಾಗೂ ಫಸ್ಟ್ ಫ್ಲೋರ್‌ನಲ್ಲಿ ಡಬಲ್ ಬೆಡ್‌ರೂಂ ಇರುವ ಮುನ್ಸಿಪಲ್ ಹಾಗೂ ಬೋರ್‌ವೆಲ್ ನೀರು ಸೌಲಭ್ಯವುಳ್ಳ ಮನೆ ಬಾಡಿಗೆಗೆ ಇದೆ. (ನೂತನವಾಗಿ ನಿರ್ಮಾಣವಾಗಿರುವ ಸರ್.ಎಂ.ವಿ ಕಾಲೇಜ್ ಹತ್ತಿರ)
**97319 68465**

**ಮನೆ-ಮಳಿಗೆ ಬಾಡಿಗೆಗೆ**
ವಾಸ್ತುವುಳ್ಳ ಪೂರ್ವ ಮುಂಬಾಗಿಲಿನ ಗ್ರೌಂಡ್ ಫ್ಲೋರ್ 2 ಮತ್ತು 3 ಬೆಡ್‌ರೂಂ, ನೀರಿನ ಸೌಕರ್ಯ, ಪಾರ್ಕಿಂಗ್ ಇದೆ. ಸಮೃದ್ಧಿ ನಿಲಯ, # 408, 8ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ, ಪಿ.ಜೆ.ಬಡಾವಣೆ.
**95386 41980, 93807 97651**

**JCB ಬಾಡಿಗೆಗೆ ಇದೆ**
ಪ್ರತಿ ಘಂಟೆಗೆ 800/- ಮಾತ್ರ.
**Concrete Breaker**
ಘಂಟೆಗೆ 1300/- ಮಾತ್ರ
**ಮೊ. 80502 19547**

**ಸೈಟುಗಳು ಬೇಕಾಗಿದೆ**
ವಿದ್ಯಾನಗರ, ತರಳಬಾಳು ಮತ್ತು ವಿನಾಯಕ ಬಡಾವಣೆ, ಶಿವಕುಮಾರಸ್ವಾಮಿ ಮತ್ತು ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ ಸೈಟುಗಳು ಬೇಕಾಗಿರುತ್ತವೆ. ಮಾರುವವರು ಸಂಪರ್ಕಿಸಿ :
**98809 33630**

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಎಸ್.ಎಸ್. ಲೇಔಟ್, ಡಾಲರ್ಸ್ ಕಾಲೋನಿ, ಶಿವಪಾರ್ವತಿ ಬಡಾವಣೆ ಹಾಗೂ ಬಾಡ ಕ್ರಾಸ್ ಹತ್ತಿರ, ಶಾಮನೂರು, ಜೆ.ಹೆಚ್ ಪಟೇಲ್ ಲೇಔಟ್, ಸರಸ್ವತಿ ನಗರ, ಭೂಮಿಕ ಲೇಔಟ್‌ನಲ್ಲಿ ಸೈಟ್‌ಗಳು, ಮನೆ ಮತ್ತು ಹೊಲ ಯೋಗ್ಯ ಬೆಲೆಗೆ ದೊರೆಯುತ್ತವೆ.
**ಅಭಿಷೇಕ್ ಅಫೈರ್, ಏಜೆಂಟ್**
**97315 12365**

**ನಿವೇಶನ ಮಾರಾಟಕ್ಕಿದೆ**
ಶಂಕರವಿಹಾರ ಬಡಾವಣೆಯಲ್ಲಿರುವ ಡೋ.ನಂ. 12, ಉತ್ತರ ಮುಖದ ನಿವೇಶನ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
**ಶೈಲೇಶ್‌ಕುಮಾರ್**
**9141541483, 9901718675**

**ಗೋಡೌನ್ ಲೀಜ್‌ಗೆ ಇದೆ**
ದಾವಣಗೆರೆ ಪಿ.ಬಿ ರಸ್ತೆಯ ಹೊಸ ಸಬ್ ರಿಜಿಸ್ಟ್ರರ್ ಆಫೀಸ್ ಹತ್ತಿರ 40x60 ಅಳತೆಯ 20 HP ಕರೆಂಟ್‌ವುಳ್ಳ ಗೋಡೌನ್ ಲೀಜ್‌ಗೆ ಇದೆ.
ಆಸಕ್ತರು ಸಂಪರ್ಕಿಸಿ:
**93410 14406, 73538 79207**


# ಗಮನ ಸೆಳೆದ ಅಮಿತಾಬ್

**(1ನೇ ಪುಟದಿಂದ)** ಒತ್ತಡ ಹೆಚ್ಚಾಗುತ್ತದೆ ಎಂದಿದ್ದಾರೆ.

ಕೊರೊನಾ ಪ್ರತ್ಯೇಕ ವಾರ್ಡ್‌ನಲ್ಲಿರುವ ರೋಗಿಗಳು ವಾರಗಟ್ಟಲೆ ಇನ್ನೊಬ್ಬ ಮನುಷ್ಯನನ್ನು ನೋಡಲು ಸಾಧ್ಯವಾಗುವುದಿಲ್ಲ. ಇಲ್ಲಿ ನರ್ಸ್‌ಗಳು ಹಾಗೂ ವೈದ್ಯರು ಇರುತ್ತಾರೆ, ಔಷಧ ಸೇರಿದಂತೆ ಕಾಳಜಿ ವಹಿಸುತ್ತಾರೆ. ಆದರೆ, ಅವರೆಲ್ಲಾ ಪಿಪಿಇ ಕಿಟ್ ಧರಿಸಿರುತ್ತಾರೆ.

ಪಿಪಿಇ ಕಿಟ್ ಹಿಂದೆ ಇರುವ ಮುಖ ಯಾವುದು ಎಂದು ಗೊತ್ತಾಗುವುದಿಲ್ಲ. ಆರೋಗ್ಯ ಕಾರ್ಯಕರ್ತರು ತಮಗೆ ಸೂಚನೆ ನೀಡಿದ ರೀತಿಯಲ್ಲಿ ಅತಿ ಹೆಚ್ಚಿನ ಎಚ್ಚರಿಕೆ ವಹಿಸಿರುತ್ತಾರೆ ಎಂದು ಅಮಿತಾಬ್ ತಿಳಿಸಿದ್ದಾರೆ.

ಅವರು ರೋಗಿಯ ಜೊತೆ ಇದ್ದಷ್ಟು ಸಮಯವೂ ಸೋಂಕಿನ ಅಪಾಯ ಹೆಚ್ಚಾಗುತ್ತದೆ. ಹೀಗಾಗಿ ರೋಗಿಯ ವರದಿ ಪಡೆಯಲು ಬಂದವರು ರೋಗಿಗೆ ಎಂದೂ ಭರವಸೆಯ ಸ್ಪರ್ಷಕ್ಕೆ ಮುಂದಾಗುವುದಿಲ್ಲ ಎಂದವರು ತಿಳಿಸಿದ್ದಾರೆ.

ವ್ಯಕ್ತಿಗಳು ಕೊರೊನಾ ಸೋಂಕಿಗೆ ಸಿಲುಕಿದಾಗ ಆತನ ಜೊತೆ ಮಾತನಾಡಿ ಭರವಸೆ ಮೂಡಿಸಬೇಕಾಗುತ್ತದೆ. ಆದರೆ, ಸೋಂಕಿನ ಕಾರಣದಿಂದಾಗಿ ಚಿಕಿತ್ಸೆ ವೈಯಕ್ತಿಕ ಹಂತದಲ್ಲಿ ಇರುವುದಿಲ್ಲ ಎಂದವರು ತಿಳಿಸಿದ್ದಾರೆ. ಇದೆಲ್ಲದರ ಕಾರಣದಿಂದಾಗಿ ಮಾನಸಿಕ ಪರಿಣಾಮವಾಗುತ್ತದೆಯೇ? ಹೌದು ಎಂದು ಮಾನಸಿಕ ಆರೋಗ್ಯ ಪರಿಣಿತರು ತಿಳಿಸುತ್ತಾರೆ. ರೋಗಿಗಳು ಬಿಡುಗಡೆಯ ನಂತರವೂ ಮಾನಸಿಕ ಒತ್ತಡದಲ್ಲಿರುತ್ತಾರೆ. ಅವರಿಗೆ ವೃತ್ತಿಪರರು ಆಪ್ತ ಸಮಾಲೋಚನೆ ಮಾಡಬೇಕಾಗುತ್ತದೆ ಎಂದು ಅಮಿತಾಬ್ ಹೇಳಿದ್ದಾರೆ.

ಕೊರೊನಾ ಕಾರಣದಿಂದಾಗಿ ತಮ್ಮನ್ನು ಬೇರೆಯಾಗಿ ಕಾಣಬಹುದು ಎಂಬ ಕಳವಳ ಅವರಲ್ಲಿರುತ್ತದೆ. ಇದರಿಂದಾಗಿ ಅಸ್ಪೃಶ್ಯತೆಯ ಭಾವನೆ ಬರಬಹುದು. ಇದರಿಂದಾಗಿ ಅವರು ಆಳವಾದ ಖಿನ್ನತೆ ಹಾಗೂ ಏಕಾಂಗಿತನಕ್ಕೂ ದೂಡಲ್ಪಡಬಹುದು ಎಂದು ಅಮಿತಾಬ್ ಕಳವಳ ವ್ಯಕ್ತಪಡಿಸಿದ್ದಾರೆ.

ತಮಗೆ ಎದುರಾದ ಈ ಒಂಟಿತನವನ್ನು ನಿವಾರಿಸಲು ಹಾಡಿನ ಮೊರೆ ಹೋಗಿರುವುದಾಗಿ ಹೇಳಿರುವ ಅಮಿತಾಬ್, ಥಂಡಿಯ ಕೋಣೆಯಲ್ಲಿ ನಡುಗುತ್ತಾ, ಹಾಡು ಹೇಳುತ್ತಾ ಮಲಗುವ ಯತ್ನ ನಡೆಸುತ್ತೇನೆ. ಅಂತಿಮವಾಗಿ ದೇವರ ದಯೆ ಇದ್ದರೆ ಇದೆಲ್ಲದರಿಂದ ಬಿಡುಗಡೆ ಇದೆ ಎಂದವರು ವೇದಾಂತಿಯಾಗಿ ಹೇಳಿದ್ದಾರೆ.

# 1.21 ಲಕ್ಷ ರೂ. ದಂಡ ವಸೂಲಿ

**(1ನೇ ಪುಟದಿಂದ)** ಸಂಗ್ರಹಿಸಲಾಗಿದೆ.

ದಾವಣಗೆರೆ ಗ್ರಾಮಾಂತರ ಉಪವಿಭಾಗದಲ್ಲಿ 125 ಮಾಸ್ಕ್ ಪ್ರಕರಣಗಳನ್ನು ದಾಖಲಿಸಿ 11 ಸಾವಿರದ 900 ದಂಡ ವಸೂಲಾಗಿದೆ. 22 ಐಎಂವಿ ಪ್ರಕರಣಗಳನ್ನು ದಾಖಲಿಸಿ 9 ಸಾವಿರದ 100 ದಂಡ ಸಂಗ್ರಹವಾಗಿದೆ. ಚನ್ನಗಿರಿ ಉಪವಿಭಾಗದಲ್ಲಿ 66 ಮಾಸ್ಕ್ ಪ್ರಕರಣಗಳ ದಾಖಲಿಸಿ 7 ಸಾವಿರದ 100 ದಂಡ ವಸೂಲಿ ಮಾಡಲಾಗಿದೆ. 112 ಐಎಂವಿ ಪ್ರಕರಣಗಳನ್ನು ದಾಖಲಿಸಿ 56 ಸಾವಿರ ದಂಡ ಸಂಗ್ರಹವಾಗಿರುವುದಾಗಿ ಎಸ್ಪಿ ಹನುಮಂತರಾಯ ತಿಳಿಸಿದ್ದಾರೆ.

# ಹರಪನಹಳ್ಳಿ : ಆಶಾ ಕಾರ್ಯಕರ್ತೆಯರ ಪ್ರತಿಭಟನೆ



ಹರಪನಹಳ್ಳಿ, ಜು.26- ವೇತನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಆಶಾ ಕಾರ್ಯಕರ್ತೆಯರು ಐ.ಬಿ. ವೃತ್ತದಲ್ಲಿ ಪ್ರತಿಭಟನೆ ನಡೆಸಿ, ತಹಶೀಲ್ದಾರ್‌ರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಎಐಟಿಯುಸಿ ಕಾರ್ಯದರ್ಶಿ ಗುಡಿಹಳ್ಳಿ ಹಾಲೇಶ್ ಮಾತನಾಡಿ, ಕೊರೊನಾ ಸಂಕಷ್ಟದಲ್ಲಿ ಜೀವ ಪಣಕ್ಕಿಟ್ಟು ಸೇವೆ ಮಾಡುತ್ತಿರುವ ಆಶಾ ಕಾರ್ಯಕರ್ತೆಯರನ್ನು ಸರ್ಕಾರ ನಿರ್ಲಕ್ಷ್ಯ ಮಾಡಿರುವುದು ನೋವಿನ ಸಂಗತಿಯಾಗಿದೆ. ವೇತನ ಹೆಚ್ಚಳ, ಬಾಕಿ ಪಾವತಿ ಸೇರಿದಂತೆ ಪ್ರಮುಖ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿರುವ ಆಶಾ ಕಾರ್ಯಕರ್ತೆಯರಿಗೆ ಸರ್ಕಾರ ಕೂಡಲೇ ಸ್ಪಂದಿಸಬೇಕು. ಇಲ್ಲವಾದಲ್ಲಿ ಇದೇ ದಿನಾಂಕ 29 ರಂದು ಜಿಲ್ಲಾ ಕೇಂದ್ರದ ಮುಂದೆ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದರು.

ಶ್ರೀ ಎಂ.ಪಿ.ಪ್ರಕಾಶ್ ಸಮಾಜ ಮುಖಿ ಟ್ರಸ್ಟ್ ಅಧ್ಯಕ್ಷರಾದ ಎಂ.ಪಿ.ವೀಣಾ ಮಹಾಂತೇಶ್ ಅವರ ಸೂಚನೆ ಮೇರೆಗೆ ಮುಖಂಡರಾದ ಗುರುಪ್ರಸಾದ್ ಮಾತನಾಡಿ, ಆಶಾ ಕಾರ್ಯಕರ್ತೆಯರು ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಆಶಾ ಕಾರ್ಯಕರ್ತೆಯರ ಪರವಾಗಿ ಶ್ರೀ ಎಂ.ಪಿ.ಪ್ರಕಾಶ್ ಸಮಾಜ ಮುಖಿ ಟ್ರಸ್ಟ್‌ನ ಸಿದ್ದನಗೌಡ್ರು, ದಾದಾಪೀರ್, ಸಚ್ಚಿನ್, ಮನೋಜ್, ಆಶಾ ಕಾರ್ಯಕರ್ತೆಯರಾದ ಗೀತಾ, ಈ.ದುರುಗಮ್ಮ, ಲಲಿತಮ್ಮ, ಎನ್. ಗಾಯತ್ರಿ, ಟಿ.ರೇಣುಕಾ, ಹೆಚ್.ಮಂಜುಳಾ, ಸಂಪಿಬಾಯಿ ಸೇರಿದಂತೆ ಇತರರು ಇದ್ದರು.

# ಔಷಧಿ : ಮಹತ್ವದ ಹೆಜ್ಜೆ

**(1ನೇ ಪುಟದಿಂದ)** ಈ ಬಗ್ಗೆ ವರದಿ ರೂಪಿಸಿದ್ದಾರೆ. ವೈರಸ್ ಮಾಡುವ ಈ ಬದಲಾವಣೆಯ ಕಾರಣದಿಂದಾಗಿ ಅದು ಮಾನವ ದೇಹದಲ್ಲಿರುವ ರೋಗ ನಿರೋಧಕ ಶಕ್ತಿಯಿಂದ ನುಣುಚಿಕೊಳ್ಳಲು ಸಾಧ್ಯವಾಗುತ್ತದೆ.

ವೈರಸ್ ಮಾಡುವ ಬದಲಾವಣೆಯಿಂದಾಗಿ ದೇಹದ ಕಣಗಳು, ವೈರಸ್ಸನ್ನು ತನ್ನದೇ ಭಾಗ ಎಂದು ಭಾವಿಸುತ್ತದೆ ಎಂದು ವಿಶ್ವವಿದ್ಯಾನಿಲಯದ ಅಧ್ಯಯನದಲ್ಲಿ ಭಾಗಿಯಾಗಿರುವ ಯೋಗೇಶ್ ಗುಪ್ತ ಹೇಳಿದ್ದಾರೆ.

ಈ ಕುರಿತು ಅಧ್ಯಯನದಿಂದಾಗಿ ಕೊರೊನಾ ವಿರುದ್ಧ ಹೋರಾಟ ನಡೆಸಲು ಹೊಸ ಔಷಧಗಳನ್ನು ರೂಪಿಸಲು ಸಾಧ್ಯವಾಗಲಿದೆ. ಅಲ್ಲದೇ ಹೊಸದಾಗಿ ಬರುವ ಕೊರೊನಾ ವೈರಸ್ ಸೋಂಕುಗಳನ್ನೂ ಪರಿಣಾಮಕಾರಿಯಾಗಿ ಎದುರಿಸಲು ಸಾಧ್ಯವಾಗಲಿದೆ ಎಂದು ಸಂಶೋಧಕರು ಹೇಳಿದ್ದಾರೆ.

ಈ ಅಧ್ಯಯನವನ್ನು ಆಧರಿಸಿ ವೈರಸ್ ವಿರೋಧದ ಔಷಧ ರೂಪಿಸುವವರು ಎನ್‌ಎಸ್‌ಪಿ10 ಕಣವನ್ನು ಗುರಿಯಾಗಿಟ್ಟುಕೊಳ್ಳಬೇಕು ಎಂದವರು ಸಲಹೆ ನೀಡಿದ್ದಾರೆ.

# ಜಿಲ್ಲಾಸ್ಪತ್ರೆಗೆ ಡಿಸಿ ದಿಢೀರ್ ಭೇಟಿ

**(1ನೇ ಪುಟದಿಂದ)** ಪರಿಶೀಲನೆ ನಡೆಸಿದರು.

ರೋಗಿಗಳಿಗೆ ಚಿಕಿತ್ಸೆ ನೀಡದೇ ಸತಾಯಿಸಿದ್ದಲ್ಲಿ ಶಿಸ್ತು ಕ್ರಮ ಜರುಗಿಸುವುದಾಗಿ ವೈದ್ಯಕೀಯ ಸಿಬ್ಬಂದಿಗಳಿಗೆ ಎಚ್ಚರಿಕೆ ನೀಡಿದರು.

ನಂತರ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಮಾತ ನಾಡಿದ ಡಿಸಿ, ಈಗಾಗಲೇ ನಗರದಲ್ಲಿರುವ ಖಾಸಗಿ ಆಸ್ಪತ್ರೆಗಳು ಶೇ.50ರಷ್ಟು ಬೆಡ್ ನೀಡಲು ಒಪ್ಪಿಕೊಂಡಿದ್ದಾರೆ. ಇಂದು ನಾನ್ ಕೋವಿಡ್ ವ್ಯಕ್ತಿಯೋರ್ವ ಸಾವನ್ನಪ್ಪಿದ್ದು, ಅವರು ಚಿಕಿತ್ಸೆಗಾಗಿ ಮೊದಲು ಬೇರೆ ಬೇರೆ ಆಸ್ಪತ್ರೆಗೆ ಹೋಗಿ ಬಂದು ನಂತರ ಜಿಲ್ಲಾಸ್ಪತ್ರೆಗೆ ಸೇರಿದ್ದಾರೆ ಎಂದು ತಿಳಿಸಿದರು.

ಖಾಸಗಿ ಆಸ್ಪತ್ರೆಗಳಲ್ಲಿ ಎಲ್ಲಾ ಸೌಲಭ್ಯವಿದ್ದು, ಚಿಕಿತ್ಸೆಗೆ ನಿರಾಕರಿಸಿದರೆ, ಅಂತಹ ಆಸ್ಪತ್ರೆಗಳ ವಿರುದ್ಧ ವಿಪತ್ತು ನಿರ್ವಹಣೆ ಕಾಯ್ದೆ ಅಡಿ ದೂರು ದಾಖಲಿಸಲಾಗುವುದು. ಯಾರಾದರೂ ಚಿಕಿತ್ಸೆ ಸಿಗದೇ ಇದ್ದರೆ ನನಗೆ ಲಿಖಿತ ದೂರು ನೀಡಬೇಕು. ದೂರು ಸಾಬೀತಾದರೆ ಅಗತ್ಯವಾಗಿ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇನೆಂದು ಸ್ಪಷ್ಟಪಡಿಸಿದ್ದಾರೆ.

# ಕಾಲಿಗೆ ಬಿಳಲು ಮುಂದಾದ ಜಿಲ್ಲಾಧಿಕಾರಿ

**(1ನೇ ಪುಟದಿಂದ) ಪೌರ ಕಾರ್ಮಿಕ ಕುಮಾರ ಅವರನ್ನು ಜಿಲ್ಲಾಸ್ಪತ್ರೆಗೆ ಕರೆದುಕೊಂಡು ಬಂದ ಸಂದರ್ಭದಲ್ಲಿ ಆಗಮಿಸಿದ್ದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಕುಮಾರ್ ಅವರ ಮಾವ ಉಚ್ಚೆಂಗೆಪ್ಪ ಸೇರಿದಂತೆ ಕುಟುಂಬಸ್ಥರು ಕೈ ಮುಗಿದು ಚಿಕಿತ್ಸೆ ಕೊಡಿಸುವಂತೆ ಮನವಿ ಮಾಡಿದ್ದು, ಆಗ ನಿಮ್ಮಗಿಂತಲೂ ಹೆಚ್ಚಿನ ದುಃಖ ನಮಗೂ ಬರಲಿದೆ ಎಂದು ಕುಟುಂಬ ವರ್ಗದವರಿಗೆ ಸಂತೈಸುತ್ತಲೇ ಡಿಸಿ ಭಾವುಕರಾದರು.**


**ತಕ್ಷಣ ಬೇಕಾಗಿದ್ದಾರೆ**
ತಿಂಡಿ ಭಟ್ಟರು ಸಂಬಳ 1 - 7000/-
ಅಡುಗೆ ಭಟ್ಟರು ಸಂಬಳ 1
ರೋಟಿ ಪರೋಟ ಮಾಡುವವರು - 10,000/-
ಮಹಿಳಾ ಸಹಾಯಕರು 1 - 5000/-
ಸಂಪರ್ಕಿಸಿ:
**99022 72893**

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗುವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
**ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066**

**REQUIRED**
**Reception & Marketing Team Required.**
**RAKSHA CHARITABLE AND EDUCATIONAL TRUST**
Anjaneya Badavane, Davangere.
Mob. **9916818369**
**8296376716**

**ಮನೆ ಲೀಸ್‌ಗೆ ಇದೆ**
ಕೊಂಡಜ್ಜಿ ರಸ್ತೆ ಅಶೋಕ ನಗರ, ದೇವನಗರಿ ಗ್ಯಾಸ್ ಗೋಡೌನ ಎದುರುಗಡೆ ಮನೆ ಲೀಸ್‌ಗೆ ಇದೆ.
2 ಬೆಡ್ ರೂಮ್, 1 ಹಾಲ್, 1 ಕಿಚ್ಚನ್
**98458 85671**

**Doctors Clinic for Rent Near Puranthar Hospital.**
*Contact :*
**94483 39242**

**Job Required**
Diploma in Electrical, field work in Harihara, Holalkere, channagiri, Honnalli rural / Taluk
Salary : 10,000 - 15,000
office: Davan college, BIET Road
**99450 49438**
Date: 01/08/2020 10 AM-12 PM

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟ, ಪಪ್ಪಾಯಿ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ರಕ್ತಚಂದನ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ವಿಳಾಸ: **ಸುಬ್ರಮಣ್ಯ ಅಗ್ರೋ ಟೆಕ್**
ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
ಮೊ: **94484 39639**
**63665 96479**

**ಬೇಕಾಗಿದ್ದಾರೆ**
ಆನ್ ಲೈನ್ ಅಪ್ಲಿಕೇಶನ್, ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್ ನಲ್ಲಿ ಅನುಭವ ಇರುವವರು ಬೇಕಾಗಿದ್ದಾರೆ.
ಸಂಪರ್ಕಿಸಿ:
**9036921415, 7019783871**

**ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ ಲಿಂಗಾಯಿತ ಮಹಿಳೆ ಬೇಕಾಗಿದ್ದಾರೆ.
**94838 62779**

**Job Required**
office Mangement/ Accountant 3years Experince with good computer knowledge (male/Female)
Salary : 10,000 - 15,000
office: Davan college, BIET Road
**99450 49438**
Date: 01/08/2020 10 AM-12 PM

**2 BHK FOR RENT**
ನೀರು, ಸೋಲಾರ್, ಲಿಫ್ಟ್, ಕಾರ್ ಪಾರ್ಕಿಂಗ್, ಸಿಸಿ ಕ್ಯಾಮೆರಾ, ಇಟಾಲಿಯನ್ ಕಿಚನ್, ವಿಶಾಲವಾದ ಹಾಲ್‌ವುಳ್ಳ 2BHK 11,000 ಬಾಡಿಗೆ ಇರುವ ಉತ್ತರ ದಿಕ್ಕಿಗಿರುವ ಎರಡನೇ ಮಹಡಿ ಮನೆ ಬಾಡಿಗೆಗೆ ದೊರೆಯುತ್ತದೆ. ವಿಳಾಸ : ಜಿಲ್ಲಾ ಪಂಚಾಯತ್ ಹತ್ತಿರ, ಫ್ಲೈ ಓವರ್ ಪಕ್ಕ, NH4, ದಾವಣಗೆರೆ.
**9986538099, 9900411110**

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ. (ಊಟ, ವಸತಿ ವ್ಯವಸ್ಥೆ ಇರುತ್ತದೆ.)
**ಫೋ. : 96062 82814**

**ಬೇಕಾಗಿದ್ದಾರೆ**
ಪ್ರತಿದಿನ ಸಂಜೆ 6 ರಿಂದ ಬೆಳಿಗ್ಗೆ 8.30ರವರೆಗೆ ಅಥವಾ 24 ಗಂಟೆಯೂ ವಯಸ್ಸಾದವರನ್ನು ನೋಡಿಕೊಳ್ಳಲು ಹೆಣ್ಣುಮಕ್ಕಳು ಬೇಕಾಗಿದ್ದಾರೆ. *ಸಂಪರ್ಕಿಸಿ :*
**98440-63507**

**ಮನೆ ಬಾಡಿಗೆಗೆ ಇದೆ**
2 BHK ಎರಡು ಮನೆಗಳು # 1868/9 ಶ್ರೀ ರೇಣುಕಾಂಬ ನಿಲಯ, 7ನೇ ಮೇನ್, 1ನೇ ಕ್ರಾಸ್, ಸ್ವಾಮಿ ವಿವೇಕಾನಂದ ಬಡಾವಣೆ, ದಾವಣಗೆರೆ ಮೊದಲನೇ ಮಹಡಿಯಲ್ಲಿ, ಬಾಡಿಗೆಗೆ ಇವೆ.
**94485 66431**
**78296 97883**

**ಮನೆ ಬಾಡಿಗೆಗೆ**
ವಿದ್ಯಾನಗರ, ಬ್ಯಾಂಕ್ ಆಫ್ ಬರೋಡ ಎದುರಿಗೆ 1659/50 ಬಿ, ಜೆ.ಪಿ.ಎಸ್. ಕಾಂಪ್ಲೆಕ್ಸ್‌ನಲ್ಲಿ ರೋಟಿ ಪಾಯಿಂಟ್ ನ ಎರಡನೇ ಮಹಡಿಯಲ್ಲಿ ಸಿಂಗಲ್ ಬೆಡ್‌ರೂಂ ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ ಅವಕಾಶ.
**96118 89575**

**ಮನೆ ಬಾಡಿಗೆಗೆ ಇದೆ**
ಡೋ.ನಂ. 853/6, ಮೊದಲನೇ ಹಂತ, ಎರಡನೇ ಮೇನ್, 6ನೇ ಕ್ರಾಸ್, ಶಿವಕುಮಾರ ಸ್ವಾಮಿ ಬಡಾವಣೆ, ಮೊದಲನೇ ಮಹಡಿಯಲ್ಲಿ, CMC ಹಾಗೂ Bore ಎರಡೂ ನೀರಿನ ವ್ಯವಸ್ಥೆ, ವಿಶಾಲವಾದ ಕಾರ್ ಪಾರ್ಕಿಂಗ್ ಇರುವ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ. ಸಂಪರ್ಕಿಸಿ :
**6361893176, 8217621050**


# ಕೊರೊನಾ : ಜಿಲ್ಲೆಯಲ್ಲಿ 3 ಸಾವು, 86 ಪಾಸಿಟಿವ್

**(1ನೇ ಪುಟದಿಂದ)** 50ರ ಪುರುಷ ದುಗ್ಗಮ್ಮನ ಪೇಟೆಯ 60ರ ಪುರುಷ, ತರಳಬಾಳು ಬಡಾವಣೆಯ 45 ಹಾಗೂ 47ರ ಪುರುಷರು ಮತ್ತು 38 ಹಾಗೂ 69ರ ಮಹಿಳೆಯರು, ಹೊಸ ಬಡಾವಣೆಯ 75ರ ವೃದ್ಧ, ಮಹಾಲಕ್ಷ್ಮಿ ಬಡಾವಣೆಯ 31ರ ಪುರುಷ, ಪಿ.ಜೆ. ಬಡಾವಣೆಯ 60ರ ಮಹಿಳೆಯರಲ್ಲಿ ಸೋಂಕಿರುವುದು ಪತ್ತೆಯಾಗಿದೆ.

ನಿಟುವಳ್ಳಿಯ 55ರ ಮಹಿಳೆ, ವಿದ್ಯಾನಗರದ 38 ಹಾಗೂ 60ರ ಮಹಿಳೆ, ಬೀಡಿ ಲೇಔಟ್‌ನ 44 ಹಾಗೂ 45ರ ಪುರುಷ, ಆಜಾದ್ ನಗರದ 48ರ ಮಹಿಳೆ ಹಾಗೂ 10ರ ಬಾಲಕಿ, ಅಶೋಕ ನಗರದ 24ರ ಪುರುಷ, ಶೇಖರಪ್ಪ ನಗರದ 22ರ ಪುರುಷ, ಪೊಲೀಸ್ ಬಡಾವಣೆಯ 34ರ ಮಹಿಳೆ, ಬಾಷಾನಗರದ 21ರ ಮಹಿಳೆ, ಸ್ವಾಮಿ ವಿವೇಕಾನಂದ ಬಡಾವಣೆಯ 43ರ ಪುರುಷ, ಕೆ.ಎಸ್.ಆರ್.ಟಿ.ಸಿ.ಯ 36ರ ವರ್ಷದ ಪುರುಷ ಚಾಲಕನಲ್ಲಿ ಸೋಂಕು ಕಂಡು ಬಂದಿದೆ.

ಸಾಂಸ್ಥಿಕ ಕ್ವಾರಂಟೈನ್‌ನಲ್ಲಿರುವ 35, 41 ಹಾಗೂ 71ರ ಮಹಿಳೆಯರು, 22, 23, 24, 28, 44, 55ರ ಹಾಗೂ 32ರರ ಪುರುಷರಲ್ಲಿ ಸೋಂಕು ಪತ್ತೆಯಾಗಿದೆ.

ದಾವಣಗೆರೆ ತಾಲ್ಲೂಕಿನ ಶಿರಮಗೊಂಡನಹಳ್ಳಿಯ 38ರ ಪುರುಷನಲ್ಲಿ ಸೋಂಕು ಕಂಡು ಬಂದಿದೆ.

ಹೊನ್ನಾಳಿಯ ಕೆ.ಎಸ್.ಆರ್.ಟಿ.ಸಿ. ಡಿಪೋದ 28ರ ಪುರುಷ ಹಾಗೂ ಹೊನ್ನಾಳಿ ತಾಲ್ಲೂಕು ಗೋಣಿಗೆರೆಯ 29ರ ಪುರುಷ, ನ್ಯಾಮತಿಯ 42ರ ಮಹಿಳೆ, ದುರ್ಗಿಗುಡಿಯ 28ರ ಪುರುಷರಲ್ಲಿ ಸೋಂಕು ಕಂಡು ಬಂದಿದೆ.

ಜಗಳೂರಿನ 75ರ ವೃದ್ಧ, 20ರ ಪುರುಷ, ಇಲ್ಲಿನ ಪಾಪಲಿಂಗೇಶ್ವರ ಬಡಾವಣೆಯ 58ರ ಮಹಿಳೆ, ಸೂರ್ಯ ನಾರಾಯಣ ಬಡಾವಣೆಯ 60ರ ಪುರುಷ, ಹನುಮಂತಾಪುರದ 19ರ ಪುರುಷ, ಕೃಷ್ಣ ಬಡಾವಣೆಯ 10ರ ಬಾಲಕನಲ್ಲಿ ಸೋಂಕು ಕಂಡು ಬಂದಿದೆ.

ಜಗಳೂರು ತಾಲ್ಲೂಕಿನ ಬಿಳಿಚೋಡಿನ 4ರ ಬಾಲಕ, 25ರ ಮಹಿಳೆ, 14ರ ಬಾಲಕಿ, 10ರ ಬಾಲಕ, ದಿದ್ದಿಗಿಯ 50ರ ಪುರುಷ, ಮುಷ್ಟೂರಿನ 11ರ ಬಾಲಕ, ಗೊಲ್ಲರಹಟ್ಟಿಯ 55ರ ಪುರುಷ, ಚಿಕ್ಕಬನ್ನಹಟ್ಟಿಯ 65ರ ಪುರುಷ ಪತ್ತೆಯಾಗಿದೆ.

ಹರಿಹರದ 39ರ ಪುರುಷ, ಹಳ್ಳದಕೇರಿಯ 60ರ ಪುರುಷ, 80ರ ವೃದ್ಧ ಹಾಗೂ ಹರಿಹರ ತಾಲ್ಲೂಕಿನ ಮಲೇಬೆನ್ನೂರಿನ ಬಸವೇಶ್ವರ ಬಡಾವಣೆಯ 45ರ ಪುರುಷ ಹಾಗೂ 20ರ ಮಹಿಳೆ, ಹಿಂಡಸಘಟ್ಟದ 43ರ ಪುರುಷನಲ್ಲಿ ಸೋಂಕು ಕಂಡು ಬಂದಿದೆ.

ಚನ್ನಗಿರಿ ನಗರದ 71ರ ವೃದ್ಧ ಮತ್ತು ಚನ್ನಗಿರಿ ತಾಲ್ಲೂಕಿನ ನಲ್ಲೂರಿನ 40ರ ಮಹಿಳೆ, 50ರ ಪುರುಷ, 11ರ ಬಾಲಕ, ಕೊರಟಗೆರೆಯ 31ರ ಪುರುಷ, ಲಿಂಗದಹಳ್ಳಿಯ 37ರ ಪುರುಷ, ಹರಸಾಗರದ 65ರ ಪುರುಷನಲ್ಲಿ ಸೋಂಕು ಕಂಡು ಬಂದಿದೆ.

ರಾಣೇಬೆನ್ನೂರಿನ 30ರ ಮಹಿಳೆಯಲ್ಲಿ ಸೋಂಕು ಕಂಡು ಬಂದಿದೆ.

ಬಿಡುಗಡೆಯಾದವರಲ್ಲಿ ದಾವಣಗೆರೆ ನಗರದ ಸಿದ್ದವೀರಪ್ಪ ಬಡಾವಣೆಯ 64ರ ಪುರುಷ, ಶಾಂತಿನಗರದ 45ರ ಮಹಿಳೆ, ಕುವೆಂಪು ನಗರದ 55 ಹಾಗೂ 58ರ ಪುರುಷರು, ಜವಳಿ ಅಂಗಡಿಯೊಂದರ 39ರ ಪುರುಷ, ಬೇತೂರು ರಸ್ತೆಯ 50ರ ಪುರುಷ, ಬಿ.ಟಿ. ಕಾಂಪೌಂಡ್‌ನ 48ರ ಪುರುಷ, ಎಂ.ಸಿ.ಸಿ. ಬಿ ಬ್ಲಾಕ್‌ನ 42 ಹಾಗೂ 66ರ ಪುರುಷರು ಹಾಗೂ 55ರ ಮಹಿಳೆ ಸೇರಿದ್ದಾರೆ.

ಆಂಜನೇಯ ಬಡಾವಣೆಯ 19, 22, 28, 61 ಹಾಗೂ 55ರ ಪುರುಷರು ಹಾಗೂ ಇದೇ ಬಡಾವಣೆಯ 48 ಹಾಗೂ 58ರ ಮಹಿಳೆಯರು, ಕೆ.ಟಿ.ಜೆ. ನಗರದ 32 ಹಾಗೂ 33ರ ಮಹಿಳೆಯರು, ಇ.ಡಬ್ಲ್ಯೂ.ಎಸ್. ಕಾಲೊನಿಯ 39ರ ಪುರುಷ , ನಿಟುವಳ್ಳಿಯ 55ರ ಪುರುಷ, ಪಿ.ಜೆ. ಬಡಾವಣೆಯ 40ರ ಪುರುಷ, ಕೊಟ್ಟೂರೇಶ್ವರ ಬಡಾವಣೆಯ 39ರ ಪುರುಷ, ಆನೆಕೊಂಡದ 51ರ ಪುರುಷ, ಭಗತ್ ಸಿಂಗ್ ನಗರದ 33ರ ಪುರುಷ, ಎಂ.ಸಿ.ಸಿ. ಎ ಬ್ಲಾಕ್‌ನ 40ರ ಪುರುಷ, ರಾಜ್ ರೆಸಿಡೆನ್ಸಿಯ 30ರ ಪುರುಷ, ಅಮರಪ್ಪನ ತೋಟದ 49ರ ಪುರುಷ, ದಾವಣಗೆರೆ ವಿಶ್ವವಿದ್ಯಾನಿಲಯದ 48ರ ಮಹಿಳೆ ಬಿಡುಗಡೆಯಾಗಿದ್ದಾರೆ.

ಹೊನ್ನಾಳಿ ತಾಲ್ಲೂಕಿನ ರಾಂಪುರದ 32ರ ಪುರುಷ ಬಿಡುಗಡೆಯಾಗಿದ್ದಾರೆ.

ಹರಿಹರದ ಜೆ.ಸಿ. ಬಡಾವಣೆಯ 63ರ ಮಹಿಳೆ, 21ರ ಮಹಿಳೆ, ಚಿನ್ನಪ್ಪ ಕಾಂಪೌಂಡ್‌ನ 20 ಹಾಗೂ 53ರ ಪುರುಷರು, ಕೆ.ಎಸ್.ಆರ್.ಟಿ.ಸಿ. ಡಿಪೋದ 39ರ ಪುರುಷ ಹಾಗೂ 48ರ ಮಹಿಳೆ, ಕೇಶವನಗರದ 25ರ ಮಹಿಳೆ ಹಾಗೂ ಹರಿಹರ ತಾಲ್ಲೂಕಿನ ಮಲೇಬೆನ್ನೂರಿನ 38ರ ಮಹಿಳೆ, ಹೊಳೆಸಿರಿಗೆರೆಯ 47ರ ಪುರುಷ, ರಾಮತೀರ್ಥದ 50ರ ಮಹಿಳೆ ಬಿಡುಗಡೆಯಾಗಿದ್ದಾರೆ.

ಚನ್ನಗಿರಿಯ ರಂಗನಾಥ ಬಡಾವಣೆಯ 29ರ ಪುರುಷ ಹಾಗೂ ಚನ್ನಗಿರಿ ತಾಲ್ಲೂಕು ಕೆರೆಬಿಳಚಿಯ 52ರ ಪುರುಷ, ಸಂತೇಬೆನ್ನೂರಿನ 43ರ ಪುರುಷ ತಣಿಗೆರೆಯ 35ರ ಪುರುಷ ಗುಣವಾಗಿದ್ದಾರೆ.

ಜಗಳೂರಿನ ಇಂದಿರಾ ನಗರದ 58ರ ಪುರುಷ, ಎನ್.ಎಂ. ರಸ್ತೆಯ 52ರ ಪುರುಷ, ಎನ್.ಜಿ.ಒ. ಕಾಲೋನಿಯ 72ರ ವೃದ್ಧ ಹಾಗೂ ಜಗಳೂರು ತಾಲ್ಲೂಕಿನ ಗುತ್ತಿದುರ್ಗದ 49ರ ಪುರುಷ, ಕೊರಟಿಕೆರೆಯ 20ರ ಪುರುಷ, ಚಿಕ್ಕ ಉಜ್ಜಿನಿಯ 28ರ ಪುರುಷ ಗುಣವಾಗಿ ಬಿಡುಗಡೆಯಾಗಿದ್ದಾರೆ.

ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಕಮ್ಮತ್ತಹಳ್ಳಿಯ 35ರ ಮಹಿಳೆ ಹಾಗೂ ಹುಬ್ಬಳ್ಳಿಯ 41ರ ಪುರುಷ, ಬೆಂಗಳೂರಿನ 52ರ ಪುರುಷ ಗುಣವಾಗಿದ್ದಾರೆ.


**ಶ್ರೀ ಅಂಜನಿಪುತ್ರ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ಧರನ್ನು ನೋಡಿಕೊಳ್ಳಲು ಆಯಾಗಳನ್ನು ಕಳಿಸುತ್ತೇವೆ. ಬಾಣಂತಿ ಮತ್ತು ಮಕ್ಕಳನ್ನು ನೋಡಿಕೊಳ್ಳಲು ಕಳುಹಿಸುತ್ತೇವೆ. ಸೆಕ್ಯೂರಿಟಿ ಸರ್ವೀಸ್. ಈ ಎಲ್ಲಾ ಸೇವೆಗಳು ಬೇಕಾಗಿದ್ದಲ್ಲಿ ಸಂಪರ್ಕಿಸಿ.
**9902464522, 9686455820**
ಯುವಕ-ಯುವತಿಯರು ಬೇಕಾಗಿದ್ದಾರೆ.

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
**8095509025**
ಕೆಲಸ 100 % ಗ್ಯಾರಂಟಿ

**ದೊರೆಯುತ್ತದೆ**
ನಮ್ಮಲ್ಲಿ ಸೂಪರ್‌ನೇಪಿಯರ್ ಮೇವಿನ ಕಡ್ಡಿಗಳು (Super Napier Grass Cuttings) ದೊರೆಯುತ್ತವೆ / ಸಿಗುತ್ತವೆ
ಸಂಪರ್ಕಿಸಿ :
**87626 21414**

**ಭೂಮಿಕಾ ಮ್ಯಾಟ್ರಿಮೋನಿ**
ಲಿಂಗಾಯತ
ವಧು-ವರರ ಕೇಂದ್ರ
Vidya Nagara, Nutan College Road, Davangere.
**Web.:www.bhoomikamatrimony.com**
**7760316576, 9008055813**

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ, ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು


## ಪುಣ್ಯಸ್ಮರಣೆ



**ಬಂಗಾರ ಶ್ರೀನಿವಾಸ್ B.E**

**ಕಂದಾ.**

ನೀನು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ನೀನಿಲ್ಲದ ಬಾಳು ನಿಸ್ಸಾರವಾಗಿದೆ. ನಿನ್ನ ರೂಪ, ನಿನ್ನ ಸವಿ ಮಾತುಗಳ ಸ್ಮರಣೆಯೇ ನಮಗೆ ಶ್ರೀರಕ್ಷೆ ನಿನ್ನ ನೆನಪಲ್ಲೇ ಕಾಲ ಕಳೆಯುವ ಹಾಗೂ ನಿನ್ನ ಪವಿತ್ರ ಆತ್ಮಕ್ಕೆ ಶಾಂತಿ ಕೋರುವ

***ಅಕ್ಕ, ಭಾವ, ಚಿಕ್ಕಪ್ಪ, ಚಿಕ್ಕಮ್ಮಂದಿರು, ಅತ್ತೆ, ಮಾವಂದಿರು, ಸಹೋದರ, ಸಹೋದರಿಯರು, ಬಂಧು - ಮಿತ್ರರು,***

## ಶ್ರೀಮತಿ ಸೌಂದ್ರ ಲಕ್ಷ್ಮಿ ನಿಧನ



ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್ 9ನೇ ಮೇನ್ ವಾಸಿ ದಿವಂಗತ **ಶ್ರೀ ಜೆ.ವಿ.ಶ್ರೀನಿವಾಸಮೂರ್ತಿ** ಅವರ ಧರ್ಮಪತ್ನಿ **ಶ್ರೀಮತಿ ಸೌಂದ್ರ ಲಕ್ಷ್ಮಿ** (76) ಅವರು ದಿ: 26-7-2020ರ ಭಾನುವಾರ ಬೆಳಗಿನ ಜಾವ 4.23ಕ್ಕೆ ಹೃದಯಾಘಾತದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರು ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ದಿ: 26-7-2020ರ ಭಾನುವಾರದಂದೇ ಮಧ್ಯಾಹ್ನ 3.30ಕ್ಕೆ ನಗರದ ಪಿ.ಬಿ.ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಿತು.

ಇಂತ ದು:ಖಿತಪ್ತ ಕುಟುಂಬ ವರ್ಗ
**ಪುತ್ರ : ಜೆ.ಎಸ್. ರವೀಂದ್ರ**
ಪ್ರಕಾಶ್ ಎಂಟರ್ ಪ್ರೈಸಸ್, ದಾವಣಗೆರೆ

## 15ನೇ ವರ್ಷದ ಪುಣ್ಯಸ್ಮರಣೆ



**ಲಿಂ॥ ವೇ॥ ಶ್ರೀ ಹೆಚ್.ಎಂ. ಸೋಮನಾಥಯ್ಯನವರು**

**ನಿಮ್ಮ ಆದರ್ಶಗಳೇ ನಮಗೆ ದಾರಿ ದೀಪ, ನೀವು ತೋರಿದ ಮಾರ್ಗದಲ್ಲಿ ಮುನ್ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲೇ ಇರುವ**


**ಶ್ರೀಮತಿ ಹೆಚ್.ಎಂ. ಸರೋಜ ಸೋಮನಾಥಯ್ಯ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಹಿರೇಮಠದ ಬಂಧು-ಮಿತ್ರರು, ಭಕ್ತ ವೃಂದ.**

**ಸಿಬ್ಬಂದಿ ವರ್ಗ : ಮೆ॥ ದೇವನಗರಿ ಗ್ಯಾಸ್ ಏಜೆನ್ಸಿ ದೇವನಗರಿ ಎಜುಕೇಷನಲ್ ಟ್ರಸ್ಟ್ (ರಿ.) । ಹೆಚ್.ಎಂ.ಎಸ್. ಕಾನ್ವೆಂಟ್, ಹಿರೇಮಠ, ಕಾಯಿಪೇಟೆ, ದಾವಣಗೆರೆ.**

# ವೈದ್ಯರನ್ನು ಯೋಚಿಸಿ

**(1ನೇ ಪುಟದಿಂದ)** ನಿರಂತರವಾಗಿ ಗಂಟೆಗಟ್ಟಲೆ ಮಾಸ್ಕ್ ಧರಿಸುತ್ತಾರೆ ಹಾಗೂ ಎಲ್ಲರ ಜೀವ ಉಳಿಸಲು ಶ್ರಮಿಸುತ್ತಿದ್ದಾರೆ. ಇವರು ಎಂಟು ಗಂಟೆ ಕಾಲ ಮಾಸ್ಕ್ ಧರಿಸುತ್ತಾರೆ. ಅವರಿಗೆ ಸಮಸ್ಯೆಯಾಗುವುದಿಲ್ಲವೇ? ಎಂದು ಪ್ರಧಾನಿ ಪ್ರಶ್ನಿಸಿದ್ದಾರೆ.


# ಅಪರಿಚಿತ ವ್ಯಕ್ತಿಯ ವಾರಸುದಾರರ ಪತ್ತೆಗೆ ಕರೆ



ದಾವಣಗೆರೆ, ಜು.26- ಇಲ್ಲಿಗೆ ಸಮೀಪದ ದೊಡ್ಡಬಾತಿ ಗ್ರಾಮದ ಗೂಡ್‌ಶೆಡ್ ಮುಂಭಾಗ ಪಿ.ಬಿ. ರಸ್ತೆಯಲ್ಲಿ ಇದೇ ದಿನಾಂಕ 22ರ ರಾತ್ರಿ 9.30ರ ಸಮಯದಲ್ಲಿ ಅಪಘಾತದಿಂದ ಗಾಯಗೊಂಡಿದ್ದ ವ್ಯಕ್ತಿಯನ್ನು ನಗರದ ಸಿ.ಜಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ ವ್ಯಕ್ತಿಯ ಹೆಸರು, ವಿಳಾಸ ತಿಳಿದಿರುವುದಿಲ್ಲ. ಪ್ರಜ್ಞಾಹೀನ ಸ್ಥಿತಿಯಲ್ಲಿರುವ ಈತ ಸುಮಾರು 30-35 ವಯಸ್ಸಿನವನಾಗಿದ್ದು, ಆರೇಂಜ್ ಕಲರ್ ಟೀ ಶರ್ಟ್, ನೀಲಿ ಕಲರ್ ಪ್ಯಾಂಟ್ ಧರಿಸಿರುತ್ತಾನೆ. ವಾರಸುದಾರರಿದ್ದಲ್ಲಿ ಗ್ರಾಮಾಂತರ ಪೊಲೀಸ್ ಠಾಣೆಯನ್ನು ಸಂಪರ್ಕಿಸುವಂತೆ ಕೋರಲಾಗಿದೆ.

## ಹಾಲಿವಾಣದ ಕೊಟ್ರಪ್ಪ ನಿಧನ



ದಾವಣಗೆರೆ ಮಹಾರಾಜಪೇಟೆ ವಿಠಲ ಮಂದಿರದ ಹತ್ತಿರದ ವಾಸಿ ಹಾಲಿವಾಣದ ಕೊಟ್ರಪ್ಪ (70) ಅವರು ದಿನಾಂಕ 26.07.2020 ರಂದು ಭಾನುವಾರ ರಾತ್ರಿ 10 ಗಂಟೆಗೆ ನಿಧನರಾಗಿದ್ದಾರೆ. ಪತ್ನಿ, ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 27.07.2020 ರಂದು ಸೋಮವಾರ ಬೆಳಿಗ್ಗೆ 11.30ಕ್ಕೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

# ಲಾಕ್‌ಗೆ ಸ್ಪಂದನೆ ಜೊತೆ ಉಲ್ಲಂಘನೆ

**(1ನೇ ಪುಟದಿಂದ)** ಓಡಾಟ ಮಾಡಿದ ವಾಹನಗಳ ಸವಾರರಿಗೆ ಪೊಲೀಸರು ದಂಡದ ಬಿಸಿ ಮುಟ್ಟಿಸಿದ್ದಾರೆ.

ಸಂಡೇ ಲಾಕ್ ಡೌನ್ ಇದ್ದರೂ ಸಹ ಅನಾವಶ್ಯಕವಾಗಿ ರಸ್ತೆಗಿಳಿದ ವಾಹನ ಸವಾರರು ಪೊಲೀಸರ ಕೈಗೆ ಸಿಕ್ಕು ದಂಡ ಹಾಕಿಸಿಕೊಂಡರು. ಮತ್ತೆ ಕೆಲವರು ಪೊಲೀಸರು ಇಲ್ಲದ ಜಾಗದಲ್ಲಿ ಸಾಗಿ ದಂಡದಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದರು. ಹೀಗೆ ಲಾಕ್ ಡೌನ್ ಉಲ್ಲಂಘಿಸಿ ಸುಮಾರು 20ಕ್ಕೂ ಹೆಚ್ಚು ವಾಹನ ಸವಾರರಿಗೆ ಪೊಲೀಸರು ದಂಡ ವಿಧಿಸಿದ್ದಾರೆ.

**ವಾಗ್ವಾದಕ್ಕಿಳಿದ ಯುವತಿ:** ವಾಹನಗಳ ಸಂಚಾರ ನಿಯಂತ್ರಿಸಲು ಪೊಲೀಸರು ಕೆಲ ಪ್ರಮುಖ ದ್ವಿಮುಖ ರಸ್ತೆಗಳು ಏಕಮುಖ ಮಾಡಲಾಗಿತ್ತು. ಲಾಕ್ ಡೌನ್ ಇದ್ದರೂ ಸಹ ಬೈಕ್ ನಲ್ಲಿ ಮಾಸ್ಕ್, ಹೆಲ್ಮೆಟ್ ಇಲ್ಲದೆ ಸಂಚರಿಸುತ್ತಿದ್ದ ಯುವಕ-ಯುವತಿ ಡಾ.ಎಂ.ಸಿ. ಮೋದಿ ವೃತ್ತದಲ್ಲಿ ಕೈಗೆ ಸಿಕ್ಕಾಗ ಪೊಲೀಸರು ತಡೆದು ದಂಡ ವಿಧಿಸಲು ಮುಂದಾರು. ಆಗ ಈ ಬಗ್ಗೆ ಪ್ರಶ್ನೆ ಮಾಡಿದ ಬಡಾವಣೆ ಠಾಣೆ ಅಪರಾಧ ವಿಭಾಗದ ಸಬ್ ಇನ್ಸ್‌ಪೆಕ್ಟರ್ ಚಿದಾನಂದ ಜೊತೆ ಯುವತಿ ವಾಗ್ವಾದಕ್ಕಿಳಿದು ಫೈನ್ ಕಟ್ಟುವುದಿಲ್ಲ ಎಂದು ವಾದಕ್ಕಿಳಿದಿದ್ದು ಕಂಡುಬಂತು.

**ಮಾರುಕಟ್ಟೆಯಲ್ಲಿ ಜನಸಂದಣಿ:** ಸಂಡೇ ಲಾಕ್ ಡೌನ್ ಇದ್ದರೂ ಕೆಎಸ್‌ಆರ್ ಟಿಸಿ ಬಳಿಯ ತರಕಾರಿ ಮಾರುಕಟ್ಟೆಯಲ್ಲಿ ಜನಸಂದಣಿ ಮುಂಜಾನೆಯಿಂದಲೇ ಇದ್ದದ್ದು ಕಂಡುಬಂತು. ಅನೇಕರು ಸಾಮಾಜಿಕ ಅಂತರವಿಲ್ಲದೆ, ಮಾಸ್ಕ್ ಧರಿಸದೇ ವ್ಯಾಪಾರ - ವಹಿವಾಟು ನಡೆಸಿದರು. ವಾಹನಗಳ ಮೂಲಕ ಅನೌನ್ಸ್ ಮಾಡುತ್ತಾ ಪೊಲೀಸರು ಜನ ಜಾಗೃತಿ ಮೂಡಿಸಿದರು.

**ಸರಳ ಮದುವೆ :** ನಗರದ ರಾಜನಹಳ್ಳಿ ಕಲ್ಯಾಣ ಮಂಟಪದಲ್ಲಿ ಲಾಕ್ ಡೌನ್ ನಡುವೆಯೇ ಪ್ರಿಯಾಂಕ ಹಾಗೂ ಶಿವಕುಮಾರ್ ಜೋಡಿಯು ಸರಳ ವಿವಾಹವಾಗಿ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ. ವಿವಾಹದಲ್ಲಿ 50 ಜನ ನಿಗದಿಯಂತೆ ಕುಟುಂಬ ವರ್ಗ, ಸಂಬಂಧಿಕರು ಪಾಲ್ಗೊಂಡಿದ್ದರು.



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

# ಸವಾಲುಗಳ ವರ್ಷ

# ಪರಿಹಾರದ ಸ್ಪರ್ಶ

ಮಾನ್ಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಆಶಯದಂತೆ, ಜೀವ-ಜೀವನ ಎರಡರ ಸಮತೋಲನಕ್ಕೆ ರಾಜ್ಯ ಸರ್ಕಾರ ಅವಿರತ ಶ್ರಮಿಸುತ್ತಿದೆ. ಆ ಮೂಲಕ ಅಭಿವೃದ್ಧಿ ಪಥದಲ್ಲಿ ಮುನ್ನಡೆದಿದೆ.



ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದ ಸರ್ಕಾರಕ್ಕೆ ಈಗ ಯಶಸ್ವಿ ಒಂದು ವರ್ಷ ಪೂರೈಸಿದ ಸಾರ್ಥಕ ಭಾವ.

ಶತಮಾನದಲ್ಲೇ ಕಂಡರಿಯದ ಭಾರೀ ಪ್ರವಾಹದಂತಹ ಸವಾಲುಗಳ ಜೊತೆಗೆ ಆರಂಭವಾದ ಆಡಳಿತ, ಕೋವಿಡ್-19 ಜಾಗತಿಕ ಸೋಂಕು ತಂದೊಡ್ಡಿದ ಸಂಕಷ್ಟಗಳ ನಡುವೆಯೂ ದೃಢ ಸಂಕಲ್ಪದೊಡನೆ ಅಭಿವೃದ್ಧಿಯ ಪಥದಲ್ಲಿ ಸಾಗಿದೆ.

### ಕೋವಿಡ್–19: ವಿಶೇಷ ಪ್ಯಾಕೇಜ್

ಲಾಕ್‌ಡೌನ್ ಸಮಯದಲ್ಲಿ ಸಂಕಷ್ಟಕ್ಕೆ ಸಿಲುಕಿದ್ದ ಅಸಂಘಟಿತ ವಲಯದ ಕಾರ್ಮಿಕರು, ಹೂವು, ಹಣ್ಣು, ತರಕಾರಿ ಬೆಳೆದ ರೈತರು, ನೇಕಾರರು, ಟ್ಯಾಕ್ಸಿ, ಆಟೋ ಚಾಲಕರು, ಕ್ಷೌರಿಕರು, ಮಡಿವಾಳರು, ಚರ್ಮ ಕುಶಲಕರ್ಮಿಗಳಿಗೆ ಪರಿಹಾರ ಒದಗಿಸಲು **2,272 ಕೋಟಿ ರೂ.** ಪ್ಯಾಕೇಜ್ ಘೋಷಣೆ ಹಾಗೂ ಸಣ್ಣ ಮತ್ತು ಬೃಹತ್ ಉದ್ಯಮದ ಕೈಗಾರಿಕಾ ವಲಯಕ್ಕೂ ಅನುಕೂಲ.







**ಬೆಂಗಳೂರು ನಗರದ ನಿರ್ಮಾತೃ ನಾಡಪ್ರಭು ಕೆಂಪೇಗೌಡರ** ಬೃಹತ್ ಪುತ್ಥಳಿಯನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ನಿರ್ಮಿಸಲು ರಾಜ್ಯ ಸರ್ಕಾರದ ಕ್ರಮ.

## ರೈತರಿಗೆ ನೆರವು



- ✦ **ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ**ಯ ಫಲಾನುಭವಿಗಳಿಗೆ ರಾಜ್ಯ ಸರ್ಕಾರದಿಂದ ಪ್ರತಿ ಫಲಾನುಭವಿಗೆ ಹೆಚ್ಚುವರಿಯಾಗಿ **4 ಸಾವಿರ ರೂ.** ಬ್ಯಾಂಕ್ ಖಾತೆಗೆ ಜಮೆ.
  **50 ಲಕ್ಷಕ್ಕೂ ಹೆಚ್ಚು ರೈತರಿಗೆ** ಅನುಕೂಲ. ಪ್ರವಾಹ ಸಂದರ್ಭದಲ್ಲಿ ಹಾಗೂ ಕೋವಿಡ್ ಸಂದರ್ಭದಲ್ಲಿ ರೈತರಿಗೆ ಈ ನೆರವು ಸಕಾಲಿಕವಾಗಿ ಒದಗಿ ಬಂದಿದೆ.
- ✦ ರೈತರ ಒಳಿತಿಗಾಗಿ ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತರಲಾಗಿದೆ.
  **ನನ್ನ ಬೆಳೆ ನನ್ನ ಹಕ್ಕು** ಎಂಬ ಸಿದ್ಧಾಂತವನ್ನು ಸಾಕಾರಗೊಳಿಸಿದ ಹೆಗ್ಗಳಿಕೆ.

## ಪ್ರಕೃತಿ ಮುನಿಸು – ಪರಿಹಾರಕ್ಕೆ ಆದ್ಯತೆ



- ✦ ರಾಜ್ಯದಲ್ಲಿ ಕಳೆದ 118 ವರ್ಷಗಳಲ್ಲೇ ಭಾರಿ ಮಳೆ ದಾಖಲು.
  **ರಾಜ್ಯದ 25 ಜಿಲ್ಲೆಗಳ 119 ತಾಲ್ಲೂಕುಗಳು** ಪ್ರವಾಹ ಪೀಡಿತ ತಾಲ್ಲೂಕುಗಳೆಂದು ಘೋಷಣೆ.
- ✦ ಕೇಂದ್ರ ಸರ್ಕಾರದ **1869 ಕೋಟಿ ರೂ**. ನೆರವು ಸೇರಿದಂತೆ ಪರಿಹಾರ ವಿತರಣೆ, ಮೂಲಸೌಕರ್ಯ ದುರಸ್ತಿ ಮತ್ತಿತರ ಕಾರ್ಯಗಳಿಗೆ ರಾಜ್ಯ ಸರ್ಕಾರದಿಂದ ಒಟ್ಟು **6108 ಕೋಟಿ ರೂ**. ಬಿಡುಗಡೆ.

## ಗ್ರಾಮೀಣ ಅಭಿವೃದ್ಧಿ



- ✦ ಗ್ರಾಮೀಣ ಪ್ರದೇಶದ ಜನಜೀವನ ಮಟ್ಟ ಸುಧಾರಿಸುವ ನಿಟ್ಟಿನಲ್ಲಿ **'ಮನೆ ಮನೆಗೆ ಗಂಗೆ'** ಯೋಜನೆಯಡಿ 2023ರೊಳಗೆ ಎಲ್ಲಾ ಗ್ರಾಮೀಣ ಪ್ರದೇಶದ ಮನೆಗಳಿಗೆ ನಲ್ಲಿಯ ಮೂಲಕ ನೀರು ಸಂಪರ್ಕ ಒದಗಿಸಲು ಯೋಜನೆ.
- ✦ 2020-21 ನೇ ಸಾಲಿನಲ್ಲಿ **8984.52 ಕೋಟಿ ರೂ**.ಗಳ ಅಂದಾಜು ಮೊತ್ತದಲ್ಲಿ **23.57 ಲಕ್ಷ** ಗ್ರಾಮೀಣ ಮನೆಗಳಿಗೆ ಕಾರ್ಯಾತ್ಮಕ 'ನಲ್ಲಿ' ಸಂಪರ್ಕ (FHTC) ಕಲ್ಪಿಸಲು ಗುರಿ.

## ಕೋವಿಡ್–19 ಸೋಂಕು ನಿಯಂತ್ರಣ



### ಕೋವಿಡ್–19 : ಅಗತ್ಯ ಸೌಲಭ್ಯ ವಿತರಣೆ

- ✦ ಕೋವಿಡ್-19 ಸೋಂಕು ತಡೆಗಟ್ಟಲು ತ್ವರಿತವಾಗಿ ಲಾಕ್‌ಡೌನ್ ಅನುಷ್ಠಾನ.

  ಲಾಕ್‌ಡೌನ್ ಅವಧಿಯಲ್ಲಿ ವಲಸೆ ಕಾರ್ಮಿಕರಿಗೆ ಸಮರ್ಪಕ ಆಹಾರ ವಿತರಣೆ, ಪಡಿತರ ವಿತರಣೆ.

  ಎಲ್ಲಾ ಜಿಲ್ಲಾ, ತಾಲ್ಲೂಕು ಆಸ್ಪತ್ರೆಗಳಲ್ಲಿ **ಹೈ ಫ್ಲೋ ಆಕ್ಸಿಜನ್** ಸೌಲಭ್ಯ ಒದಗಿಸಲು ಕ್ರಮ ಮತ್ತು ಸೋಂಕಿತರಿಗೆ ಸಕಾಲದಲ್ಲಿ ಚಿಕಿತ್ಸೆ ನೀಡುವ ಮೂಲಕ ಜೀವರಕ್ಷಣೆಗೆ ಆದ್ಯತೆ.

### ಉದ್ಯಮಿಗಳಿಗೆ ಬೆಂಬಲ



- ✦ ಸಣ್ಣ ಉದ್ಯಮಿಗಳಿಗೆ ವಿದ್ಯುತ್ ಬಿಲ್ಲಿನ ಫಿಕ್ಸೆಡ್ ಚಾರ್ಜ್ ಮನ್ನಾ.

  ಬೃಹತ್ ಕೈಗಾರಿಕೆಗಳಿಗೆ ಫಿಕ್ಸೆಡ್ ಚಾರ್ಜ್‌ನ್ನು ಪಾವತಿಯ ಬಡ್ಡಿ ರಹಿತ ಮುಂದೂಡಿಕೆ ಮೊದಲಾದ ಉಪಕ್ರಮಗಳ ಮೂಲಕ ಉದ್ಯಮಿಗಳಿಗೆ ಬೆಂಬಲ.

## ಮೀನುಗಾರರ ಸಾಲಮನ್ನಾ



- ✦ ಮೀನುಗಾರರ **60 ಕೋಟಿ ರೂ**. ಸಾಲಮನ್ನಾ.
  **23,507** ಮೀನುಗಾರರಿಗೆ, ವಿಶೇಷವಾಗಿ ಮಹಿಳಾ ಮೀನುಗಾರರ ವಾಣಿಜ್ಯ ಬ್ಯಾಂಕುಗಳಲ್ಲಿನ **50,000/- ರೂ**. ವರೆಗಿನ ಸಾಲಮನ್ನಾ.

## ನೇಕಾರರ ಸಾಲಮನ್ನಾ



- ✦ ನೇಕಾರರ **98 ಕೋಟಿ ರೂ**. ಸಾಲಮನ್ನಾ. **29,631** ನೇಕಾರರ ಸಹಕಾರಿ ಬ್ಯಾಂಕುಗಳಲ್ಲಿನ 1 ಲಕ್ಷ ರೂ.ವರೆಗಿನ ಸಾಲಮನ್ನಾ. 2019 ಜನವರಿಯಿಂದ ಮಾರ್ಚ್ 31ರ ಅವಧಿಯಲ್ಲಿ ಸಾಲ ಮರುಪಾವತಿ ಮಾಡಿದ ನೇಕಾರರಿಗೂ ಈ ಸೌಲಭ್ಯ ವಿಸ್ತರಣೆ.
- ✦ ಕೈಮಗ್ಗ ನೇಕಾರರಿಗೆ ವಾರ್ಷಿಕ ತಲಾ **2000 ರೂ**. ಆರ್ಥಿಕ ನೆರವು ನೀಡುವ **'ನೇಕಾರ ಸಮ್ಮಾನ ಯೋಜನೆ'**ಗೆ ಚಾಲನೆ.

## ಕಲ್ಯಾಣ ಕರ್ನಾಟಕ ಪರ್ವಕ್ಕೆ ಚಾಲನೆ



- ✦ ಕಲ್ಯಾಣ ಕರ್ನಾಟಕ ಭಾಗದ 21 ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೆ ಆದ್ಯತೆ.
- ✦ ಬಹು ವರ್ಷಗಳ ಬೇಡಿಕೆಯಾಗಿದ್ದ ಕರ್ನಾಟಕ ಆಡಳಿತ ನ್ಯಾಯಮಂಡಳಿಯ **ಕಲಬುರಗಿ ಪೀಠಕ್ಕೆ** ಚಾಲನೆ. ಇದರಿಂದ ಈ ಭಾಗದ ಸರ್ಕಾರಿ ನೌಕರರಿಗೆ ಅನುಕೂಲ.

## ಕೈಗಾರಿಕಾ ಬೆಳವಣಿಗೆ





- ✦ ಸ್ವಿಟ್ಜರ್ಲೆಂಡಿನ ದಾವೋಸ್ ನಲ್ಲಿ ನಡೆದ **ವರ್ಲ್ಡ್ ಎಕನಾಮಿಕ್ ಫೋರಂ** ಸಮಾವೇಶದಲ್ಲಿ ಪಾಲ್ಗೊಂಡ ಮುಖ್ಯಮಂತ್ರಿಗಳಿಂದ **40 ಕ್ಕೂ ಹೆಚ್ಚು** ಜಾಗತಿಕ ಪ್ರತಿಷ್ಠಿತ ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಪ್ರತ್ಯೇಕ ಮಾತುಕತೆ. ರಾಜ್ಯದಲ್ಲಿ ಬಂಡವಾಳ ಹೂಡಿಕೆ ಮಾಡುವಂತೆ ಮನವೊಲಿಕೆ.
- ✦ ರೈತರು ಹಾಗೂ ಉದ್ಯಮಿಗಳಿಗೆ ಅನುಕೂಲ ಕಲ್ಪಿಸಲು ಭೂಸುಧಾರಣಾ ಕಾಯ್ದೆ 1961ರ ಕಲಂ 109 ಕ್ಕೆ ತಿದ್ದುಪಡಿ ಹಾಗೂ ಕಲಂ 79 ಎ, ಬಿ, ಸಿ ಮತ್ತು 80 ಪೂರ್ವಾನ್ವಯವಾಗಿ ರದ್ದು.
- ✦ ಕೈಗಾರಿಕೆಗಳ ಬೆಳವಣಿಗೆಗೆ ಪೂರಕವಾಗಿ ರಾಜ್ಯದಲ್ಲಿ **ಕಲಬುರಗಿ, ಬೀದರ್ ವಿಮಾನ ನಿಲ್ದಾಣಗಳ ಕಾರ್ಯಾರಂಭ**. ಶಿವಮೊಗ್ಗ ಕಿರು ವಿಮಾನ ನಿಲ್ದಾಣ ಕಾಮಗಾರಿಗೆ ವೇಗ.
- ✦ ಕೈಗಾರಿಕೋದ್ಯಮಿಗಳ ಬೇಡಿಕೆಯ ಮಾನವ ಸಂಪನ್ಮೂಲ ಹಾಗೂ ಉದ್ಯೋಗಾಕಾಂಕ್ಷಿಗಳನ್ನು ಒಂದೇ ವೇದಿಕೆಯಡಿ ತರುವ **ಸ್ಕಿಲ್ ಕನೆಕ್ಟ್** ಪೋರ್ಟಲ್ ಪ್ರಾರಂಭ.

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು" –ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ



# ಅಂಕೆಯಿಲ್ಲದ ಅಂಕಿ-ಅಂಶ !

ಬ್ರೋ, ಈ ಕೋವಿಡ್ ಯುಗ ಸ್ಟಾರ್ಟ್ ಆದಾಗ ಆರಂಭದಲ್ಲಿ ಇದು ಸೆಂಚುರಿ ಹೊಡೆಯೋಕೆ ವಾರಗಟ್ಟಲೇ ತಗೋತ್ತಿತ್ತು. ಈಗ ಒಂದೇ ದಿನದಲ್ಲಿ ಸೆಂಚುರಿ ಹೊಡಿತಾ ಇದೆ! ಒಂದೊಂದು ದಿನ ನಾಲ್ಕು ಐದೇ ಸ್ಕೋರ್ ಹೊಡೆಯುತ್ತೆ!! ಏನು ಇದರ ಮರ್ಮ - ನಮ್ಮ ಕರ್ಮ.

**ಬ್ರದರ್ ಈ ಕೊರೊನಾ ಸೋಂಕಿತರ ಸ್ಯಾಂಪಲ್ಸ್ ಗಳು ಸಾವಿರಗಟ್ಟಲೇ ಲ್ಯಾಬ್ ಗಳಲ್ಲಿ ಟೆಸ್ಟ್ ಆಗ್ತಾ ಇರುತ್ತೆ. ಪ್ರತಿ ದಿನ ಸುಮಾರು ಇನ್ನೂರು ಮುನ್ನೂರು ರಿಸಲ್ಟ್ಸ್ ಬರ್ತಾವೆ. ಅವುಗಳು ಈ ರೀತಿ ವ್ಯತ್ಯಾಸ ಆಗ್ತಾ ಇರ್ತಾವೆ. ಈಗ ಕೋವಿಡ್ ಸಾಕಷ್ಟು ಸ್ಪ್ರೆಡ್ ಆಗ್ತಾ ಇದೆ. ಐ ಮೀನ್ ಹರಡುತ್ತಾ ಇದೆ. ಆದ್ದರಿಂದ ಲೆಕ್ಕ ಹೆಚ್ಚು ಕಡಿಮೆ ಆಗ್ತಾನೇ ಇರುತ್ತೆ.**

ಆದರೇ, ಬ್ರೋ ದಿನಕ್ಕೆ ಜಿಲ್ಲೆಯಲ್ಲಿ ನೂರು, ರಾಜ್ಯದಲ್ಲಿ ಸಾವಿರ ಹೀಗೆ ಆಗ್ತಾ ಹೋದರೇ ಜನರಿಗೆ ಹೆದರಿಕೆ ಆಗಲ್ವಾ?

**ತಮ್ಮಾ, ಕೇವಲ ಕೋವಿಡ್ ಸೋಂಕಿತರ ಸಂಖ್ಯೆ ಕೌಂಟ್ ಮಾಡಬೇಡ. ದಿನಕ್ಕೆ ಎಷ್ಟು ಜನ ಕೋವಿಡ್ ನಿಂದ ಗುಣಮುಖ ಆದರು ಅದನ್ನು ನೋಡು. ರಿಕವರಿ ರೇಟ್ ಅರವತ್ತೈದು ಪರ್ಸೆಂಟ್ ಮೇಲಿದೆ. ಸಾವಿನ ಸಂಖ್ಯೆ ಓನ್ಲೀ ಎರಡೂವರೆ ಪರ್ಸೆಂಟ್ ಇರೋದು. ಸಮಾಧಾನದ ವಿಷಯ ಅಲ್ವಾ? ಕೆಲವು ಸರ್ವೇಗಳು ಈಗ ಕೋವಿಡ್ ದೇಶದ ಕೋಟಿಗಟ್ಟಲೇ ಜನಕ್ಕೆ ಗೊತ್ತಿಲ್ಲದೇ ಬಂದು ಹೋಗಿದೆ ಅಂತಾ ರಿಪೋರ್ಟ್ ಮಾಡಿವೆ. ಕೊರೊನಾಕ್ಕೆ ನಾವು ಹೆದರೋ ಅಗತ್ಯ ಇಲ್ಲ.**

ಮತ್ತೇ, ಮಿಡಿಯಾಗಳಲ್ಲಿ ಅದರಲ್ಲೂ ಟಿ.ವಿ.ಗಳಲ್ಲಿ ಕೊರೊನಾ ರಣಕೇಕೆ ಎಂದು ಕೇಕೆ ಹಾಕ್ತಾರಲ್ಲಾ?



- ಆರ್.ಟಿ.

**ನೋಡು ಬ್ರದರ್, ಕೊರೊನಾ ನೂರು, ಸಾವಿರ ಜನಕ್ಕೆ ಬಂದಿದೆ ಅಂಥಾ ಸೈಲೆಂಟ್ ಆಗಿ ಹೇಳಿದ್ರೇ ಮಜಾ ಇರೋಲ್ಲಾ. ಅದನ್ನು ವೈಲೆಂಟಾಗಿ ಹೇಳಿದರೇ ಜನ ಬೆಚ್ಚಿ ಬೀಳೋದು. ಜನ ಎಚ್ಚೆತ್ತುಕೊಳ್ಳಲಿ ಎಂಬ ಉದ್ದೇಶ ಇರಬಹುದು.**

ಹಂಗಂತೀಯಾ? ನಾನು ಟಿ.ಆರ್.ಪಿ ಜಾಸ್ತಿ ಮಾಡೋಕೆ ಹಂಗೆ ಹೇಳ್ತಾರೆ ಅಂದುಕೊಂಡಿದ್ದೆ.

**ಗುರೂ, ಯಾವುದೋ ಒಂದು ಅಂದ್ಕೋ. ಅಷ್ಟು ಬೊಂಬ್ಡಾ ಹೊಡೆದ್ರೂ ನಮ್ಮ ಜನ ಇನ್ನೂ ಎಚ್ಚರಗೊಂಡಿಲ್ಲ. ಮಾಸ್ಕ್ ಇಲ್ಲದೇ ತಿರುಗ್ತಾರೆ. ಸೋಷಿಯಲ್ ಡಿಸ್ಟೆನ್ಸ್ ಮೇಂಟೇನ್ ಮಾಡೋಲ್ಲ. ಇದಕ್ಕೆ ಏನಂತಿಯಾ?**

ಅದು ನಿಜ ಬಿಡು. ಇದು ಕೋಣನ ಮುಂದೆ ಕಿನ್ನರಿ ಬಾರಿಸಿದ ಹಾಗೆ. ಹೌದೂ, ಈ ಅಂಕಿ-ಅಂಶಗಳನ್ನು ಗಮನಿಸಿದರೆ ಮುಂದೆ ಏನು ಆಗಬಹುದು?

**ಆಗೋದು ಆಗೇ ಆಗುತ್ತೆ ಬ್ರದರ್. ಕೊರೊನಾ ಹೆಚ್ಚು ಕಡಿಮೆ ಎಲ್ಲರಿಗೂ ಬರುತ್ತೆ, ಹೋಗುತ್ತೆ. ನಮ್ಮ ಹುಷಾರಿನಲ್ಲಿ ನಾವು ಇರಬೇಕು. ನಮ್ಮ ಇಮ್ಯೂನಿಟಿ ಪವರ್ ಜಾಸ್ತಿ ಮಾಡ್ಕೋಬೇಕು. ಧೈರ್ಯದಿಂದ ಎದುರಿಸಬೇಕು. ಈ ಅಂಕಿ-ಅಂಶಗಳನ್ನು ಜಾಸ್ತಿ ಗಮನಿಸಬೇಡ. ಅದೂ ನಿನ್ನ ಬ್ಲಡ್ ಪ್ರೆಷರ್ ಜಾಸ್ತಿ ಮಾಡುತ್ತೆ.**

ಸರಿ ಹಾಗಾದರೆ.

**ಈ ಅಂಕಿ-ಅಂಶ ಒಂದೊಂದು ಸಲ ಹೇಗೆ ಯಾಮಾರಿಸುತ್ತೆ ಅಂತಾ ಪ್ರೊ. ಬಿ.ಜಿ. ನಾಗರಾಜ್ ಪ್ರಸಂಗವೊಂದನ್ನು ಹೇಳ್ತಾ ಇದ್ದರು. ದೆಹಲಿಯ ಪತ್ರಿಕೆಯೊಂದರಲ್ಲಿ ಒಂದು ಇಂಜಿನಿಯರಿಂಗ್ ಕಾಲೇಜಿನ ಅಧ್ಯಾಪಕರ ಹಾಗೂ ವಿದ್ಯಾರ್ಥಿಗಳ ವಿಷಯ ಪ್ರಕಟವಾಗಿತ್ತಂತೆ.**

ಏನಂತಾ?

**ಅಲ್ಲಿನ ಡಿಪಾರ್ಟ್ ಮೆಂಟ್ ಒಂದರಲ್ಲಿ ಶೇಕಡಾ ಐವತ್ತು ವಿದ್ಯಾರ್ಥಿನಿಯರು ತಮ್ಮ ಅಧ್ಯಾಪಕರನ್ನೇ ಮದುವೆ ಆಗಿದ್ದಾರೆ ಎಂದು. ಇದನ್ನು ಓದಿದ ಪೋಷಕರು ತಮ್ಮ ಹೆಣ್ಣು ಮಕ್ಕಳನ್ನು ಆ ಕಾಲೇಜಿಗೆ ಸೇರಿಸಲು ಹಿಂದೇಟು ಹಾಕುತ್ತಿದ್ದರು. ನಂತರ ವಿಚಾರಿಸಿದಾಗ, ಆ ಡಿಪಾರ್ಟ್ ಮೆಂಟ್‌ನಲ್ಲಿ ಓದುತ್ತಿದ್ದುದು ಕೇವಲ ಇಬ್ಬರೇ ಹುಡುಗಿಯರು. ಒಬ್ಬ ವಿದ್ಯಾರ್ಥಿನಿ ತನ್ನ ಯುವ ಅಧ್ಯಾಪಕನನ್ನೇ ಮದುವೆಯಾಗಿದ್ದಳು!**

ಅಂದರೇ?

**ಆಯ್ತುಲ್ಲಾ ಫಿಫ್ಟೀ ಪರ್ಸೆಂಟ್!!!**

# ಪರರ ಕಷ್ಟಕ್ಕೆ ಮಿಡಿವ ಹೃದಯಗಳು ಹೆಚ್ಚಾಗಲಿ : ಶರಣರು

ಚಿತ್ರದುರ್ಗ, ಜು. 26- ಅನ್ಯರ ಕಷ್ಟಗಳಿಗೆ ಮಿಡಿಯುವ ಸ್ಪಂದನಾಶೀಲ ಸಹೃದಯ ನಮ್ಮದಾಗಬೇಕು. ಸಮಾಜದ ಆರೋಗ್ಯ ಕಾಪಾಡುವಲ್ಲಿ ಸಹೃದಯದ ಪಾತ್ರ ಬಹಳಷ್ಟಿದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಇಲ್ಲಿನ ಮುರುಘಾ ಮಠದಲ್ಲಿ ಭಾನುವಾರ ನಡೆದ ಶ್ರಾವಣ ದರ್ಶನ ಆರನೇ ದಿನದ ಫೇಸ್‌ಬುಕ್ ಮತ್ತು ಯುಟ್ಯೂಬ್ ಲೈವ್ ಕಾರ್ಯಕ್ರಮದಲ್ಲಿ ಹೃದಯದ ಅನಾವರಣ ವಿಷಯ ಕುರಿತು ಅವರು ಮಾತನಾಡಿದರು.

ದೇವರು ಅಥವಾ ಗುರುಗಳ ಸನ್ನಿಧಿಯಲ್ಲಿ ನಿಂತು, ನನ್ನ ಹೃದಯವನ್ನು ಅರಳಿಸು ಎಂದು ಅಪ್ಪಿತಪ್ಪಿಯೂ ಯಾರೂ ಪ್ರಾರ್ಥನೆ ಮಾಡುವುದಿಲ್ಲ. ನನಗೂ ಒಂದು ಹೃದಯವಿದೆ ಎಂಬ ಭಾವನೆ ಬಂದರೆ ಅದೊಂದು ಉತ್ತಮವಾದ



ಸಾರ್ಥಕ ಜೀವನ ಎಂದು ಕರೆಸಿಕೊಳ್ಳುತ್ತದೆ. ಸಮಾಜದಲ್ಲಿ ಹೃದಯಹೀನರಂತೆ ವರ್ತಿಸುವವರೇ ಹೆಚ್ಚಾಗಿದ್ದಾರೆ ಎಂದರು.

ದಾರ್ಶನಿಕರು, ಸತ್ಪುರುಷರು ಕೇವಲ ನಾಲಿಗೆಯ ಮುಖಾಂತರವಾಗಿ ಮಾತ್ರ ಮಾತನಾಡುವುದಿಲ್ಲ. ಹೃದಯದ ಮುಖಾಂತರವಾಗಿ ಮಾತನಾಡುತ್ತಾರೆ. ಪ್ರವಚನಗಳು ಹೃದಯದ ಮೂಲಕ ಬರಬೇಕು. ಹೃದಯ ಅದೊಂದು ಬರೀ ಉಸಿರಾಟದ ಗಾಳಿಯ ಯಂತ್ರವಲ್ಲ, ಅದರೊಳಗೆ ಒಂದು ಬದುಕು ಇದೆ. ನಮ್ಮ ಬದುಕಿನ ಕೇಂದ್ರವೆಂದರೆ ಹೃದಯ. ಅಂತಹ ಹೃದಯದ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ತನ್ನ ಹಾಗು ಬೇರೆಯವರ ಹೃದಯಕ್ಕೂ ಯಾವುದೇ ರೀತಿಯ ನೋವು ಆಗದಂತೆ ನೋಡಿಕೊಳ್ಳವುದು ನಮ್ಮ ಪೂಜೆಯಾಗಬೇಕು ಎಂದು ಶರಣರು ಹೇಳಿದರು.

# ರಾಮ ಮಂದಿರ ಶಿಲಾನ್ಯಾಸ ಪ್ರಸಾರ

**(1ನೇ ಪುಟದಿಂದ)** ಹಾಗೂ ಆರ್.ಎಸ್.ಎಸ್. ಮುಖ್ಯಸ್ಥ ಮೋಹನ್ ಭಾಗವತ್ ಮತ್ತಿತರರಿಗೂ ಆಹ್ವಾನ ನೀಡಲಾಗಿದೆ.

ಎಲ್ಲಾ ಧರ್ಮಗಳ ಅಧ್ಯಾತ್ಮಿಕ ನಾಯಕರಿಗೂ ಸಹ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಹ್ವಾನ ನೀಡಲಾಗುವುದು ಎಂದು ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಸದಸ್ಯ ಅನಿಲ್ ಮಿಶ್ರ ತಿಳಿಸಿದ್ದಾರೆ.

ಕೊರೊನಾ ವೈರಸ್ ಸೋಂಕು ಹಾಗೂ ಸಾಮಾಜಿಕ ಅಂತರದ ಹಿನ್ನೆಲೆಯಲ್ಲಿ ಈ ಸಮಾರಂಭದಲ್ಲಿ 200ಕ್ಕೂ ಹೆಚ್ಚು ಜನರು ಪಾಲ್ಗೊಳ್ಳುವ ಹಾಗಿಲ್ಲ. ಇನ್ನೂ ಆಹ್ವಾನಿತರ ಪಟ್ಟಿಯನ್ನು ಅಂತಿಮಗೊಳಿಸಿಲ್ಲ ಎಂದು ಮಿಶ್ರ ತಿಳಿಸಿದ್ದಾರೆ.

ಆರ್.ಎಸ್.ಎಸ್.ನ ಹಿರಿಯ ನಾಯಕರಾದ ಭಾಗವತ್, ಪ್ರಧಾನ ಕಾರ್ಯದರ್ಶಿ ಸುರೇಶ್ ಭಯ್ಯಾಜಿ ಜೋಷಿ, ವಿ.ಹೆಚ್.ಪಿ. ಕಾರ್ಯಕಾರಿ ಅಧ್ಯಕ್ಷ ಅಲೋಕ್ ಕುಮಾರ್ ಮತ್ತಿತರರಿಗೆ ಆಹ್ವಾನ ನೀಡಲಾಗುವುದು ಎಂದು ದೇವಾಲಯದ ಇನ್ನೋರ್ವ ಟ್ರಸ್ಟಿ ಕಾಮೇಶ್ವರ ಚೌಪಲ್ ತಿಳಿಸಿದ್ದಾರೆ.

ಭೂಮಿ ಪೂಜೆಗಾಗಿ ಗುರುದ್ವಾರ, ಬೌದ್ಧ ವಿಹಾರ ಹಾಗೂ ಜೈನ ದೇವಾಲಯಗಳೂ ಸೇರಿದಂತೆ ಎಲ್ಲ ಪ್ರಮುಖ ಪೂಜಾ ಸ್ಥಳಗಳಿಂದ ಮಣ್ಣು ಸಂಗ್ರಹಿಸಲಾಗಿದೆ ಎಂದು ಚೌಪಲ್ ತಿಳಿಸಿದ್ದಾರೆ.

ಇದು ಸ್ವತಂತ್ರ ಭಾರತದ ಇತಿಹಾಸದಲ್ಲಿ ಅತ್ಯಂತ ಪ್ರಮುಖ ಕಾರ್ಯಕ್ರಮವಾಗಿರಲಿದೆ ಎಂದಿರುವ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್, ಇದನ್ನು ದೂರದರ್ಶನ ಹಾಗೂ ಇತರೆ ವಾಹಿನಿಗಳಲ್ಲಿ ನೇರ ಪ್ರಸಾರ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ರಾಮ ದೇವರ ಭಕ್ತರು ಅಯೋಧ್ಯೆಗೆ ಬರದೇ, ಈ ಸಂದರ್ಭದಲ್ಲಿ ಮನೆಗಳಲ್ಲಿದ್ದು ಇಲ್ಲವೇ ಹತ್ತಿರದ ದೇವಾಲಯಗಳಲ್ಲಿದ್ದು ವೀಕ್ಷಿಸಬೇಕು ಎಂದವರು ಕರೆ ನೀಡಿದ್ದಾರೆ.

ದೇವಾಲಯಕ್ಕಾಗಿ ಹಲವಾರು ಪುಣ್ಯಕ್ಷೇತ್ರಗಳಿಂದ ಮಣ್ಣು ಸಂಗ್ರಹಿಸುವ ಕಾರ್ಯದಲ್ಲಿ ವಿಶ್ವ ಹಿಂದೂ ಪರಿಷತ್ ಕೈ ಜೋಡಿಸಿದೆ. ಈ ಬಗ್ಗೆ ಹೇಳಿಕೆ ನೀಡಿರುವ ಸಂಘಟನೆಯ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್, ಕೊರೊನಾ ಸೋಂಕು ಕಡಿಮೆಯಾದ ನಂತರ ದೇವಾಲಯ ನಿರ್ಮಾಣಕ್ಕಾಗಿ ದೇಶಾದ್ಯಂತದ ಜನರಿಂದ ದೇಣಿಗೆ ಸಂಗ್ರಹಿಸಲಾಗುವುದು. ಹತ್ತು ಕೋಟಿ ಕುಟುಂಬಗಳಿಗೆ ತಲುಪುವ ಗುರಿ ಇದೆ ಎಂದು ಹೇಳಿದ್ದಾರೆ.

ಇದು ಶತಮಾನದಲ್ಲೊಮ್ಮೆ ನಡೆಯುವ ಘಟನೆ ಎಂದು ಹೇಳಿರುವ ಕುಮಾರ್, ಭೂಮಿ ಪೂಜೆ ಕಾರ್ಯಕ್ರಮ ಭವ್ಯ ಸಮಾರಂಭವಾಗಲಿದೆ ಎಂಬ ಆಶಯ ವ್ಯಕ್ತಪಡಿಸಿದ್ದಾರೆ.

# ನಗರಕ್ಕೆ ಇಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ



ನಗರಾಭಿವೃದ್ಧಿ ಖಾತೆ ಸಚಿವರೂ ಆಗಿರುವ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ್ ಅವರು ಇಂದು ಬೆಳಿಗ್ಗೆ 6 ಗಂಟೆಗೆ ಬೆಂಗಳೂರಿನಿಂದ ಹೊರಟು 9.15ಕ್ಕೆ ನಗರಕ್ಕೆ ಆಗಮಿಸುವರು.

ಕರ್ನಾಟಕ ಸರ್ಕಾರ ಒಂದು ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಸರ್ಕಾರದ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ವಿವಿಧ ಯೋಜನೆಗಳಡಿಯ ಫಲಾನುಭವಿಗಳೊಂದಿಗೆ ಮುಖ್ಯಮಂತ್ರಿಗಳ ಜೊತೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಏರ್ಪಡಿಸಲಾಗಿರುವ ವಿಡಿಯೋ ಸಂವಾದ ಕಾರ್ಯಕ್ರಮದಲ್ಲಿ ಸಚಿವರು ಪಾಲ್ಗೊಳ್ಳುವರು. ಮಧ್ಯಾಹ್ನ 2.30 ಗಂಟೆಗೆ ನಗರದಿಂದ ನಿರ್ಗಮಿಸುವರು.

# ಹರಿಹರ: ಲಾಕ್‌ಡೌನ್‌ಗೆ ಸ್ಪಂದನೆ



ಹರಿಹರ, ಜು.26- ಕೊರೊನಾ ಹರಡುವಿಕೆ ಪ್ರಮಾಣ ತಡೆಗಟ್ಟಲು ಸರ್ಕಾರ ಘೋಷಿಸಿರುವ ಭಾನುವಾರದ ಲಾಕ್ ಡೌನ್‌ಗೆ ನಗರದ ವ್ಯಾಪಾರಸ್ಥರು ತಮ್ಮ ಅಂಗಡಿ ಮುಂಗಟ್ಟುಗಳನ್ನು ಸ್ಥಗಿತಗೊಳಿಸಿ ಬಂದ್ ಗೆ ಬೆಂಬಲ ನೀಡಿದರು.

ತರಕಾರಿ, ದಿನಸಿ ಪದಾರ್ಥ, ಹಾರ್ಡ್‌ವೇರ್, ಹೂವು, ಹಣ್ಣು, ಬಟ್ಟೆ, ಎಲೆಕ್ಟ್ರಾನಿಕ್, ಎಲೆಕ್ಟ್ರಿಕ್, ಗೊಬ್ಬರ, ಹೋಟೆಲ್, ಬೇಕರಿ, ಬಾರ್ ಅಂಡ್ ರೆಸ್ಟೋರೆಂಟ್, ಫೋಟೋ ಸ್ಟುಡಿಯೋ, ಗ್ಯಾರೇಜ್, ಟೈರ್ ಆಂಡ್ ಟ್ಯೂಬ್, ಮೊಬೈಲ್, ಸೇರಿದಂತೆ ಹಲವಾರು ಅಂಗಡಿಗಳು ತಮ್ಮ ವ್ಯಾಪಾರ ವಹಿವಾಟು ಸ್ಥಗಿತಗೊಳಿಸಿದ್ದವು.

ಜನನಿಬಿಡ ಪ್ರದೇಶವಾದ ತರಕಾರಿ ಮಾರುಕಟ್ಟೆ, ಮುಖ್ಯರಸ್ತೆ, ರಾಣಿ ಚೆನ್ನಮ್ಮ ವೃತ್ತ, ದೇವಸ್ಥಾನ ರಸ್ತೆ, ಹೈಸ್ಕೂಲ್ ಬಡಾವಣೆ, ಹರಪನಹಳ್ಳಿ ರಸ್ತೆ, ಹಳೆ ಪಿ.ಬಿ. ರಸ್ತೆ, ಶೋಭಾ ಟಾಕೀಸ್ ರಸ್ತೆ ಸೇರಿದಂತೆ ಹಲವಾರು ರಸ್ತೆಯಲ್ಲಿ ಸಾರ್ವಜನಿಕರ ಓಡಾಟವಿಲ್ಲದೆ ಬಿಕೋ ಎನ್ನುತ್ತಿದ್ದವು. ಅಗತ್ಯ ವಸ್ತುಗಳಾದ ಹಾಲು, ಔಷಧಿ, ಆಸ್ಪತ್ರೆ ಮಾತ್ರ ತೆರೆಯಲ್ಪಟ್ಟಿದ್ದವು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪ, ಪೌರಾಯುಕ್ತರಾದ ಶ್ರೀಮತಿ ಎಸ್. ಲಕ್ಷ್ಮಿ, ಸಿಪಿಐ ಎಸ್. ಶಿವಪ್ರಸಾದ್, ಪಿಎಸ್ಐ ಡಿ. ರವಿಕುಮಾರ್, ಎಸ್. ಶೈಲಾಶ್ರೀ ಸೇರಿದಂತೆ ತಾಲ್ಲೂಕು ಆಡಳಿತ ಮತ್ತು ನಗರಸಭೆ ಸಿಬ್ಬಂದಿಗಳು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡರು.

# 24 ಗಂಟೆಗಳಲ್ಲಿ 36 ಸಹಸ್ರ ಚೇತರಿಕೆ

**(1ನೇ ಪುಟದಿಂದ)** ದಶಲಕ್ಷ ಜನಸಂಖ್ಯೆಗೆ ನಡೆಸಲಾದ ಪರೀಕ್ಷೆಯ ಪ್ರಮಾಣ 11,805ಕ್ಕೆ ತಲುಪಿದೆ. ಒಟ್ಟಾರೆ 1,62,91,331 ಕೊರೊನಾ ಪರೀಕ್ಷೆಗಳನ್ನು ನಡೆಸಲಾಗಿದೆ. ಇದೇ ದಿನ ಸರ್ಕಾರಿ ಲ್ಯಾಬ್‌ಗಳು ದಾಖಲೆಯ 3,62,153 ಪರೀಕ್ಷೆಗಳನ್ನು ನಡೆಸಿವೆ. ಖಾಸಗಿ ಲ್ಯಾಬ್‌ಗಳೂ ಸಹ 79,878 ಪರೀಕ್ಷೆಗಳನ್ನು ನಡೆಸುವ ಮೂಲಕ ದಾಖಲೆ ಬರೆದಿವೆ ಎಂದು ಸಚಿವಾಲಯ ತಿಳಿಸಿದೆ.

ಕೊರೊನಾ ಸೋಂಕಿತರನ್ನು ಪರೀಕ್ಷಿಸಿ ಅವರನ್ನು ಗುರುತಿಸಿ ಚಿಕಿತ್ಸೆ ನೀಡುವ ಗುರಿ ಈಡೇರಿಸಲು ರಾಜ್ಯಗಳು ಹೆಚ್ಚಿನ ಪ್ರಮಾಣದಲ್ಲಿ ಪರೀಕ್ಷೆ ನಡೆಸಬೇಕು ಎಂದು ಕೇಂದ್ರ ಸರ್ಕಾರ ಸಲಹೆ ನೀಡಿದೆ.

ಪರೀಕ್ಷೆಗಳ ಸಂಖ್ಯೆಗಳನ್ನು ತೀವ್ರವಾಗಿ ಹೆಚ್ಚಿಸಿ, ಆಸ್ಪತ್ರೆಯ ಮೂಲ ಸೌಲಭ್ಯಗಳನ್ನು ಹೆಚ್ಚಿಸಿದ ಕಾರಣಕ್ಕಾಗಿ ಕೊರೊನಾ ಸೋಂಕಿತರನ್ನು ಆರಂಭದಲ್ಲೇ ಗುರುತಿಸಲು ಸಾಧ್ಯವಾಗಿದೆ. ಇದರಿಂದಾಗಿ ಸಾವುಗಳ ಸಂಖ್ಯೆ ಇಳಿಮುಖವಾಗಿದೆ ಎಂದು ಸಚಿವಾಲಯ ತಿಳಿಸಿದೆ.







JANATHAVANI - RNI No: 27369/75, KA/SK/CTA-275/2018-2020. O/P @ J.D. Circle P.O. Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte